ದೂರವಾಣಿ ಸಂಖ್ಯೆ : 08182 229933 / 264101
ಫ್ಯಾಕ್ಸ್ ಸಂಖ್ಯೆ : 08182 264100

ಕರ್ನಾಟಕ ಸರ್ಕಾರ
# ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ವೈದ್ಯಕೀಯ ಶಿಕ್ಷಣ ಸ್ವಾಯುತ್ತ ಸಂಸ್ಥೆ, ಸಾಗರ ರಸ್ತೆ, ಶಿವಮೊಗ್ಗ – 577201
www.sims-shimoga.com

## ದಿನಾಂಕ: 23–03–2013 ರಂದು ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆದ ಖರೀದಿ ಸಮಿತಿ ಸಭೆಯ ಅನುಪಾಲನಾ ವರದಿ

| ಕ್ರ ಸಂ. | ವಿಷಯ | ಪ್ರಸ್ತಾಪ | ತೀರ್ಮಾನ | ಅನುಪಾಲನಾ ವರದಿ |
|---|---|---|---|---|
| 1 | **ದಿನಾಂಕ: 04/10/2012 ರ ಖರೀದಿ ಸಮಿತಿ ನಂತರ ತುರ್ತು ಸಾಮಾಗ್ರಿಗಳು ಮತ್ತು ಔಷಧಗಳನ್ನು ಖರೀದಿಸಿರುವ ಬಗ್ಗೆ.** | ದಿನಾಂಕ: 04/10/2012 ರ ಖರೀದಿ ಸಮಿತಿ ಸಭೆಯ ನಂತರ ತುರ್ತು ಸಾಮಾಗ್ರಿಗಳು, ಔಷಧಗಳು, ಉಪಕರಣಗಳನ್ನು ಖರೀದಿಸಿರುವ ವಿವರವಾದ ಪಟ್ಟಿಯನ್ನು ತಯಾರಿಸಿ, ಘಟನೋತ್ತರ ಅನುಮೋದನೆಗಾಗಿ ಸಭೆಯಲ್ಲಿ ಮಂಡಿಸಲಾಯಿತು. | ಬೋಧನಾ ಮೆಗ್ಗಾನ್ ಆಸ್ಪತ್ರೆ ಹಾಗೂ ಸಿಮ್ಸ್ ಸಂಸ್ಥೆಗೆ ಅತ್ಯಂತ ತುರ್ತು ಅವಶ್ಯವಿರುವ ಔಷಧಿಗಳು, ರಾಸಾಯನಿಕಗಳು ಲ್ಯಾಬ್ ಉಪಕರಣಗಳು ಹಾಗೂ ಇತರೆ ಸಾಮಾಗ್ರಿಗಳನ್ನು ಖರೀದಿಸಿರುವುದನ್ನು ಸಭೆಯು ಅನುಮೋದಿಸಿತು. | ಕ್ರಮವಹಿಸಲಾಗಿದೆ ಅನುಬಂಧ–1 ರಲ್ಲಿ ಪ್ರತಿಯನ್ನು ಲಗತ್ತಿಸಿದೆ. |
| 2 | **ಬೋಧನಾ ಆಸ್ಪತ್ರೆ ಮತ್ತು ಸಂಸ್ಥೆಗೆ ಬೇಕಾಗುವ ಸ್ಟೇಷನರಿ ಮತ್ತು ಇತರೆ ಸಾಮಾಗ್ರಿಗಳನ್ನು ಖರೀದಿಸುವ ಬಗ್ಗೆ. (2012–13 ನೇ ಸಾಲಿಗೆ)** | ಸಂಸ್ಥೆ ಮತ್ತು ಬೋಧನಾ ಮೆಗ್ಗಾನ್ ಆಸ್ಪತ್ರೆಗೆ 2012–13 ನೇ ಸಾಲಿನ ಟೆಂಡರ್ ಪ್ರಕ್ರಿಯೆಯಲ್ಲಿ ಲಭ್ಯವಿಲ್ಲದಿರುವ ಸ್ಟೇಷನರಿ ಸಾಮಾಗ್ರಿಗಳನ್ನು ಖರೀದಿ ಸಮಿತಿಯ ಘಟನೋತ್ತರ ಷರತ್ತಿಗೊಳಪಟ್ಟು ಖರೀದಿಸಿದ್ದು ಅನುಮೋದನೆಗಾಗಿ ವಿಷಯವನ್ನು ಮಂಡಿಸಲಾಯಿತು. | ಬೋಧನಾ ಮೆಗ್ಗಾನ್ ಆಸ್ಪತ್ರೆ ಮತ್ತು ಸಂಸ್ಥೆಗೆ 2012–13 ನೇ ಸಾಲಿನ ಟೆಂಡರ್ ಪ್ರಕ್ರಿಯೆಯಲ್ಲಿ ಲಭ್ಯವಿಲ್ಲದಿರುವ ಸಾಮಗ್ರಿಗಳು ತುರ್ತಾಗಿ ಬೇಕಾಗಿದ್ದು, ಪಾರದರ್ಶಕ ಖರೀದಿ ನಿಯಮ ಅನುಸರಿಸಿ ದರಪಟ್ಟಿ ಮುಖಾಂತರ ಎಲ್–1 ಸಂಸ್ಥೆಯವರಾದ ಮೆ॥ ಮಲ್ಲೇಶ್ವರ ಪ್ರಿಂಟರ್ಸ್, ಭದ್ರಾವತಿ ಇವರಿಂದ ಸ್ಟೇಷನರಿ ಸಾಮಾಗ್ರಿಗಳನ್ನು ಖರೀದಿಸಲಾಗಿದೆ ಎಂದು ಸಭೆಗೆ ತಿಳಿಸಿದರು. ಸಭೆಯು ಪರಿಶೀಲಿಸಿ ಅನುಮೋದಿಸಿತು. ಅಂದಾಜು ಮೊತ್ತ ರೂ. 45049/– (ಯೋಜನೇತರ ಲೆಕ್ಕಶೀರ್ಷಿಕೆಯಡಿಯಲ್ಲಿ) | ಕಛೇರಿ ಆದೇಶ ಸಂಖ್ಯೆ:ಸಿಮ್ಸ್/ಉಗ್ರಾಣ/ಸಿ–8/ವಿವ–33/282/13–14, ದಿನಾಂಕ: 29/05/2013 ರ ಆದೇಶದಂತೆ ಸದರಿ ಸಂಸ್ಥೆಯವರು ಸ್ಟೇಷನರಿ ಸಾಮಾಗ್ರಿಗಳನ್ನು ಸರಬರಾಜು ಮಾಡಿದ್ದು, ಈ ಸಂಸ್ಥೆಯವರಿಗೆ ಹಣ ಪಾವತಿಸಲು ಕ್ರಮವಹಿಸಲಾಗಿದೆ. |

| | | | | |
|---|---|---|---|---|
| 3 | **ಭೋದನಾ ಆಸ್ಪತ್ರೆ ಮತ್ತು ಸಂಸ್ಥೆಗೆ ಬೇಕಾಗುವ ರಾಸಾಯನಿಕಗಳ ಖರೀದಿ ಬಗ್ಗೆ.** | ಸಂಸ್ಥೆ ಹಾಗೂ ಬೋಧನಾ ಮೆಗ್ಗಾನ್ ಆಸ್ಪತ್ರೆಗೆ 2011-12 ನೇ ಸಾಲಿನ ಟೆಂಡರ್ ಪ್ರಕ್ರಿಯೆಯಲ್ಲಿ ಲಭ್ಯವಿಲ್ಲದಿರುವ ರಾಸಾಯನಿಕಗಳು ಮತ್ತು ರೀ-ಏಜೆಂಟ್ಸ್‌ಗಳನ್ನು ಖರೀದಿಸಲು ವೈದ್ಯಕೀಯ ಅಧೀಕ್ಷಕರು, ಫಾರ್ಮಕಾಲಜಿ ಹಾಗೂ ಬಯೋಕೆಮಿಸ್ಟ್ರಿ ವಿಭಾಗದ ಮುಖ್ಯಸ್ಥರಿಂದ ಬೇಡಿಕೆ ಸಲ್ಲಿಸಿದ್ದು, ಈ ರಾಸಾಯನಿಕ ಮತ್ತು ರೀ-ಏಜೆಂಟ್ಸ್‌ಗಳನ್ನು ಖರೀದಿಸಲು ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು. | ಆರ್ಥಿಕ ಸಲಹೆಗಾರರು ಮಾತನಾಡಿ, ಬೋಧನಾ ಮೆಗ್ಗಾನ್ ಆಸ್ಪತ್ರೆ ಹಾಗೂ ಸಂಸ್ಥೆಗೆ ಈಗಾಗಲೇ 2011-12ನೇ ಸಾಲಿಗೆ ಟೆಂಡರ್ ಪ್ರಕ್ರಿಯೆ ಮುಖಾಂತರ ರಾಸಾಯನಿಕಗಳು ಹಾಗೂ ರೀ-ಏಜೆಂಟ್ಸ್‌ಗಳನ್ನು ಖರೀದಿಸಿದ್ದು, ಟೆಂಡರ್‌ನಲ್ಲಿ ಲಭ್ಯವಿಲ್ಲದೇ ಇರುವ ರಾಸಾಯನಿಕಗಳು ಅತ್ಯಂತ ತುರ್ತು ಅವಶ್ಯವಿದ್ದಾಗ ದರಪಟ್ಟಿ ಮುಖಾಂತರ ಖರೀದಿಸಬೇಕಾಗಿದೆ ಎಂದು ಸಭೆಗೆ ತಿಳಿಸಿದರು. ಸಭೆಯು ಪರಿಶೀಲಿಸಿ, ಅನುಮೋದಿಸಿತು. ಅಂದಾಜು ಮೊತ್ತ ರೂ. 50000/- (ಯೋಜನೆ ಲೆಕ್ಕಶೀರ್ಷಿಕೆಯಡಿಯಲ್ಲಿ) | ದರಪಟ್ಟಿ ಅಹ್ವಾನಿಸಲು ಕ್ರಮವಹಿಸಲಾಗಿದೆ. |
| 4 | **ಡಯಾಲಿಸಿಸ್ ವಿಭಾಗದ ರಾಸಾಯನಿಕಗಳು ಮತ್ತು ರೀ-ಏಜೆಂಟ್ಸ್‌ಗಳ ಇ-ಟೆಂಡರ್ ಅನುಮೋದಿಸುವ ಬಗ್ಗೆ.** | ದಿನಾಂಕ: 05/12/2012 ರಂದು ಬೋಧನಾ ಮೆಗ್ಗಾನ್ ಆಸ್ಪತ್ರೆಯ ಡಯಾಲಿಸಿಸ್ ವಿಭಾಗಕ್ಕೆ ಅವಶ್ಯವಿರುವ ರಾಸಾಯನಿಕಗಳು ಮತ್ತು ರೀ ಏಜೆಂಟ್ಸ್‌ಗಳನ್ನು ಖರೀದಿಸಲು ಇ-ಟೆಂಡರ್‌ನ್ನು ಅಹ್ವಾನಿಸಲಾಗಿದ್ದು, ದಿನಾಂಕ: 08/01/2013 ರಂದು ಇ-ಟೆಂಡರ್‌ನ್ನು ತೆರೆಯಲಾಗಿದ್ದು, ಟೆಂಡರ್ ಅನುಮೋದನೆಗಾಗಿ ವಿಷಯವನ್ನು ಸಭೆಗೆ ಮಂಡಿಸಲಾಯಿತು. | ಮುಖ್ಯ ಆಡಳಿತಾಧಿಕಾರಿಗಳು ಮಾತನಾಡಿ, ಬೋಧನಾ ಮೆಗ್ಗಾನ್ ಆಸ್ಪತ್ರೆಯ ಡಯಾಲಿಸಿಸ್ ರೋಗಿಗಳ ಚಿಕಿತ್ಸೆಗೆ ವಾರ್ಷಿಕವಾಗಿ ಅವಶ್ಯವಿರುವ ರಾಸಾಯನಿಕ ಮತ್ತು ರೀ-ಏಜೆಂಟ್ಸ್‌ಗಳನ್ನು ಇ-ಟೆಂಡರ್ ಪ್ರಕ್ರಿಯೆ ಮುಖಾಂತರ ಖರೀದಿಸಲು ದಿನಾಂಕ: 05/12/2012 ರಂದು ಪತ್ರಿಕಾ ಪ್ರಕಟಣೆ ಹೊರಡಿಸಲಾಗಿ, ದಿನಾಂಕ: 08/01/2013 ರಂದು ಇ-ಟೆಂಡರ್‌ನ್ನು ತೆರೆಯಲಾಯಿತು. ಟೆಂಡರ್ ಪ್ರಕ್ರಿಯೆಯಲ್ಲಿ ಟೆಂಡರ್ ನಿಬಂಧನೆಯಂತೆ, 03 ಸಂಸ್ಥೆಯವರು ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿ, ಎಲ್-1 ಸಂಸ್ಥೆಯವರಾಗಿ ಆಯ್ಕೆಯಾಗಿರುತ್ತಾರೆ. 1) ಮೆ॥ ಕೆ.ಕೆ. ಅಲಿಯಾಂಜ್, ಬೆಂಗಳೂರು, 2) ಆರ್.ಎಸ್. ಎಂಟರ್‌ಪ್ರೈಸೆಸ್, ಬೆಂಗಳೂರು, ಹಾಗೂ 3) ಮೆ॥ ಶ್ರೇಯಸ್ ಎಂಟರ್‌ಪ್ರೈಸೆಸ್, ಬೆಂಗಳೂರು ಇವರಿಗೆ ಸರಬರಾಜು ಆದೇಶ ನೀಡಲಾಗಿರುವುದಾಗಿ ವಿಷಯವನ್ನು ಪರಿಶೀಲಿಸಿ, ಅನುಮೋದಿಸಿತು. (ಯೋಜನೇತರ ಲೆಕ್ಕಶೀರ್ಷಿಕೆಯಡಿಯಲ್ಲಿ) | ಬೋಧನಾ ಮೆಗ್ಗಾನ್ ಆಸ್ಪತ್ರೆಯ ಡಯಾಲಿಸಿಸ್ ವಿಭಾಗಕ್ಕೆ ಇ-ಟೆಂಡರ್ ಪ್ರಕ್ರಿಯೆ ಮುಖಾಂತರ ಎಲ್-1 ಸಂಸ್ಥೆಯವರಿಂದ ರಾಸಾಯನಿಕಗಳು ಮತ್ತು ರಿ-ಏಜೆಂಟ್ಸ್‌ಗಳನ್ನು ಖರೀದಿಸಲಾಗುತ್ತಿದೆ. |

| | | | | |
|---|---|---|---|---|
| 5 | **ಆಸ್ಪತ್ರೆಯ ಅವಶ್ಯಕ ಸಾಮಾಗ್ರಿಗಳು ಹಾಗೂ ಡಿಸ್ಪೋಸೆಬಲ್‌ಗಳ ಇ–ಟೆಂಡರ್ ಅನುಮೋದಿಸುವ ಬಗ್ಗೆ.** | ಬೋಧನಾ ಮೆಗ್ಗಾನ್ ಆಸ್ಪತ್ರೆಗೆ 2012–13 ನೇ ಸಾಲಿಗೆ ಆಸ್ಪತ್ರೆಯ ಅವಶ್ಯಕ ಸಾಮಾಗ್ರಿಗಳು ಹಾಗೂ ಡಿಸ್ಪೋಸೆಬಲ್ಸ್‌ಗಳನ್ನು ಖರೀದಿ ಮಾಡಲು ದಿನಾಂಕ: 20/12/2012 ರಂದು ಇ–ಟೆಂಡರ್ ಅಹ್ವಾನಿಸಿದ್ದು, ದಿನಾಂಕ: 23/01/2013 ರಂದು ಇ–ಟೆಂಡರ್ ತೆರೆಯಲಾಗಿದ್ದು, ಟೆಂಡರ್ ಅನುಮೋದನೆಗಾಗಿ ವಿಷಯವನ್ನು ಸಭೆಗೆ ಮಂಡಿಸಲಾಯಿತು. | ವೈದ್ಯಕೀಯ ಅಧೀಕ್ಷಕರು ಮಾತನಾಡಿ, 2012–13 ನೇ ಸಾಲಿಗೆ ಆಸ್ಪತ್ರೆಯ ಅವಶ್ಯಕ ಸಾಮಾಗ್ರಿಗಳು ಹಾಗೂ ಡಿಸ್ಪೋಸೆಬಲ್ಸ್‌ಗಳನ್ನು ಖರೀದಿಸಲು ಇ–ಟೆಂಡರ್ ಅಹ್ವಾನಿಸಿದ್ದು, ದಿನಾಂಕ: 23/01/2013 ರಂದು ಇ–ಟೆಂಡರ್ ತೆರೆಯಲಾಗಿ, ಟೆಂಡರ್ ಪ್ರಕ್ರಿಯೆಯಲ್ಲಿ ಒಟ್ಟು 13 ಸಂಸ್ಥೆಯವರು ಭಾಗವಹಿಸಿರುತ್ತಾರೆ. ಇದರಲ್ಲಿ ಮೆ॥ ಶ್ರೀ ವಿಘ್ನೇಶ್ವರ ಪ್ಲಾಸ್ಟಿಕ್ ಇಂಡಸ್ಟ್ರೀಸ್, ಬೆಂಗಳೂರುರವರು ಟೆಂಡರ್‌ನಲ್ಲಿ ನಮೂದಿಸಿದ ನಿಬಂಧನೆಯಂತೆ ದಾಖಲಾತಿಗಳನ್ನು ಸಲ್ಲಿಸದೇ ಇರುವುದರಿಂದ ಈ ಸಂಸ್ಥೆಯವರನ್ನು ಪ್ರೈಸ್ ಬಿಡ್ ಪ್ರಕ್ರಿಯೆಯಿಂದ ಕೈಬಿಡಲಾಯಿತು.<br>ಉಳಿದ 12 ಸಂಸ್ಥೆಯವರಾದ ಮೆ॥ ದ್ರುಮುಖ ಎಂಟರ್‌ಪ್ರೈಸೆಸ್, ಶಿವಮೊಗ್ಗ, 2) ಮನು ಸರ್ಜಿಜಲ್ & ಸೈಂಟಿಫಿಕ್ ಸಪ್ಲೆಯರ್ಸ್, ಶಿವಮೊಗ್ಗ. 3) ದೀಪಜ್ಯೋತಿ ಎಂಟರ್‌ಪ್ರೈಸೆಸ್, ಮಂಗಳೂರು 4) ರೆಸ್ಕು ಫಾರ್ಮ(RESCUE PHARMA), ಮೈಸೂರು 5) ಶ್ರೀ ಮಾರುತಿ ಫಾರ್ಮ, ಬೆಂಗಳೂರು 6) ರಾಜಲಕ್ಷ್ಮಿ ಏಜನ್ಸಿಸ್, ಬೆಂಗಳೂರು 7) ಎಸ್.ಆರ್.ಇಂಡಿಯಾ ಬಿಜನೆಸ್ ಸೆಂಟರ್, ತುಮಕೂರು ಜಿಲ್ಲೆ 8) ಬೆಂಗಳೂರು ನಗರ ಜಿಲ್ಲೆ ಸರಬರಾಜು ಮತ್ತು ಮಾರಾಟ ಸಹಕಾರ ಸಂಘ ನಿಯಮಿತ, ಬೆಂಗಳೂರು, 9) ಆರ್.ಎಸ್. ಎಂಟರ್‌ಪ್ರೈಸೆಸ್ ಪ್ರೈ.ಲಿ. ಬೆಂಗಳೂರು 10) ಮಾರ್ಕ್ಸ್ ಫಾರ್ಮ, ಬೆಂಗಳೂರು 11) ರಾಹುಲ್ ಫಾರ್ಮ, ಬೆಂಗಳೂರು 12) ಕೆ.ಕೆ. ಅಲಿಯಾಂಜ್, ಬೆಂಗಳೂರು ಇವರುಗಳಿಗೆ ಸರಬರಾಜು | ಬೋಧನಾ ಮೆಗ್ಗಾನ್ ಆಸ್ಪತ್ರೆಗೆ ಅವಶ್ಯಕ ಸಾಮಾಗ್ರಿಗಳು ಹಾಗೂ ಡಿಸ್ಪೋಬೆಲ್ಸ್ ಸಾಮಾಗ್ರಿಗಳನ್ನು ಇ–ಟೆಂಡರ್ ಪ್ರಕ್ರಿಯೆ ಮುಖಾಂತರ ಎಲ್–1 ಟೆಂಡರ್‌ದಾರರಿಂದ ಖರೀದಿಸಲಾಗುತ್ತಿದೆ. |

| | | | | |
|---|---|---|---|---|
| | | | ಆದೇಶ ನೀಡಲಾಗಿದೆ. ಸಭೆಯ ಚರ್ಚೆಯ ನಂತರ ಅನುಮೋದಿಸಲಾಯಿತು. (ಯೋಜನೇತರ ಲೆಕ್ಕಶೀರ್ಷಿಕೆಯಡಿಯಲ್ಲಿ) | |
| 6 | **ಭೋದನಾ ಆಸ್ಪತ್ರೆಯ ಅನಸ್ತೇಶಿಯಾ ವಿಭಾಗಕ್ಕೆ ವೆಂಟಿಲೇಟರ್ ಖರೀದಿಗೆ ಇ-ಟೆಂಡರ್ ಪ್ರಕ್ರಿಯೆಯ ಅನುಮೋದನೆ ಬಗ್ಗೆ.** | ದಿನಾಂಕ: 03/01/2013 ರಂದು ಬೋಧನಾ ಮೆಗ್ಗಾನ್ ಆಸ್ಪತ್ರೆಯ ಅನೆಸ್ತೇಶಿಯಾ ವಿಭಾಗಕ್ಕೆ ಅವಶ್ಯವಿರುವ ವೆಂಟಿಲೇಟರ್‌ಗಳನ್ನು ಖರೀದಿಸಲು ಇ-ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. | ಮಾನ್ಯ ನಿರ್ದೇಶಕರು ಮಾತನಾಡಿ ಬೋಧನಾ ಆಸ್ಪತ್ರೆಯ ಅನಸ್ತೇಶಿಯಾ ವಿಭಾಗದಲ್ಲಿ ವೆಂಟಿಲೇಟರ್‌ಗಳು ಇಲ್ಲದೇ ಇದ್ದುದರಿಂದ ರೋಗಿಗಳ ಚಿಕಿತ್ಸೆಗೆ ತುಂಬಾ ತೊಂದರೆಯಾಗುತ್ತಿರುವುದಾಗಿ ವಿಭಾಗದ ಮುಖ್ಯಸ್ಥರು ಕೋರಿಕೆ ಪತ್ರ ಸಲ್ಲಿಸಿದ್ದರಿಂದ ದಿನಾಂಕ:03/01/2013 ರಂದು ಇ-ಟೆಂಡರ್ ಆಹ್ವಾನಿಸಿ ದಿನಾಂಕ:21/01/2013 ಕ್ಕೆ ಟೆಂಡರ್ ತೆರೆಯಲಾಗಿದ್ದು, ಇ-ಟೆಂಡರ್ ಪ್ರಕ್ರಿಯೆಯಲ್ಲಿ ನಾಲ್ಕು ಸಂಸ್ಥೆಗಳೂ ಟೆಕ್ನಿಕಲ್ ಬಿಡ್ಡಿನಲ್ಲಿ ಅರ್ಹತೆಯನ್ನು ಹೊಂದಿದ್ದು ಪಾರದರ್ಶಕ ಖರೀದಿ ನಿಯಮದಂತೆ ಪ್ರಾತ್ಯಕ್ಷಿಕ ವರದಿಯಲ್ಲಿ ವಿಭಾಗದ ಮುಖ್ಯಸ್ಥರು ಮೂರು ಸಂಸ್ಥೆಗಳನ್ನು ಆಯ್ಕೆ ಮಾಡಿದ್ದು, ಈ ಮೂರು ಸಂಸ್ಥೆಗಳ ಪ್ರೈಸ್ ಬಿಡ್ಡನ್ನು ತೆರೆಯಲಾಗಿ ಮೆ॥ ಹೋಂ ಮೆಡಿಕ್ಸ್, ಬೆಂಗಳೂರು ಇವರು ಎಲ್1 ಆಗಿರುವುದರಿಂದ ಸದರಿ ಸಂಸ್ಥೆಯವರಿಂದ 5 ಅನಸ್ತೇಶಿಯಾ ವೆಂಟಿಲೇಟರ್‌ಗಳನ್ನು ಖರೀದಿಸಲಾಗಿದೆ ಹಾಗೂ ಸಂಸ್ಥೆಯ ವಿವಿಧ ಖಾತೆಗಳಿಂದ ಬಂದಿರುವ ಬಡ್ಡಿ ಹಣದ ಮೊತ್ತದ ರೂ.55.00 ಲಕ್ಷಗಳಲ್ಲಿ ಈ ವೆಂಟಿಲೆಟರ್‌ಗಳನ್ನು ಖರೀದಿಸಲು ಆರ್ಥಿಕ ಸಮಿತಿಯಲ್ಲಿ ಅನುಮೋದನೆ ಪಡೆಯಲಾಗಿದ್ದು 5 ಯಂತ್ರಗಳನ್ನು ಖರೀದಿಸಿದ್ದು ಇನ್ನೂ 2 ಯಂತ್ರಗಳನ್ನು ಖರೀದಿಸಲು ಬಡ್ಡಿ ಹಣ ಉಳಿದಿರುವುದರಿಂದ ಇದೇ ದರದಲ್ಲಿ ಇನ್ನೆರೆಡು ವೆಂಟಿಲೇಟರ್‌ಗಳನ್ನು ಖರೀದಿಸಲು ಸಭೆಯು ಅನುಮೋದಿಸಿತು. (ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಬಂದ ಬಡ್ಡಿ ಹಣದಿಂದ ಪಾವತಿಸಲಾಗುವುದು) | ಸದರಿ ಸಂಸ್ಥೆಯವರು ವೆಂಟಿಲೇಟರ್‌ಗಳನ್ನು ಸರಬರಾಜು ಮಾಡಿ, ಅಳವಡಿಸುವ ಕಾರ್ಯ ಪೂರ್ಣಗೊಂಡಿದ್ದು, ಈ ಸಂಸ್ಥೆಯವರಿಗೆ ರೂ. 4874100.00 ಗಳನ್ನು ಬಡ್ಡಿ ಹಣದಿಂದ 2210 ಯೋಜನೆಯಡಿಯಲ್ಲಿ ಪಾವತಿಸಲಾಗಿದೆ. |

| | | | | |
|---|---|---|---|---|
| 7 | **ಸಿಮ್ಸ್ ಸಂಸ್ಥೆಗೆ ಯು.ಪಿ.ಎಸ್‌ಗಳನ್ನು ಖರೀದಿಸುವ ಬಗ್ಗೆ.** | ಸಂಸ್ಥೆ ಮತ್ತು ಬೋಧನಾ ಮೆಗ್ಗಾನ್ ಆಸ್ಪತ್ರೆಗೆ ಯು.ಪಿ.ಎಸ್‌ಗಳನ್ನು ಡಿ.ಜಿ.ಎಸ್ ಅಂಡ್ ಡಿ ದರಪಟ್ಟಿಯ ಮುಖಾಂತರ ಯು.ಪಿ.ಎಸ್‌ಗಳನ್ನು ಖರೀದಿಸಲು ವಿಷಯವನ್ನು ಸಭೆಗೆ ಮಂಡಿಸಲಾಯಿತು. | ಈಗಾಗಲೇ ಸಂಸ್ಥೆಯ ಕಾಲೇಜು ವಿಭಾಗಗಳಾದ ಅನಾಟಮಿ ಫಾರೆನ್ಸಿಕ್ ಮೆಡಿಸನ್, ಫಾರ್ಮಾಕಾಲಜಿ, ಹಾಗೂ ಬೋಧನಾ ಮೆಗ್ಗಾನ್ ಆಸ್ಪತ್ರೆಯ ಕೆಲವು ವಿಭಾಗಗಳಿಂದ ಯು.ಪಿ.ಎಸ್‌ಗಳನ್ನು ಖರೀದಿಸಲು ಬೇಡಿಕೆ ಪತ್ರಗಳನ್ನು ವಿಭಾಗದ ಮುಖ್ಯಸ್ಥರು ಸಲ್ಲಿಸಿದ್ದು, ಆದರೆ ಕೇಂದ್ರ ಸರ್ಕಾರದಿಂದ ಈ ಯು.ಪಿ.ಎಸ್‌ಗಳನ್ನು ಖರೀದಿಸಲು ಡಿ.ಜಿ.ಎಸ್ ಅಂಡ್ ಡಿ ದರಪಟ್ಟಿಯ ಅನುಮೋದನೆ ಆಗಿಲ್ಲದ ಕಾರಣ ಸಧ್ಯಕ್ಕೆ ಕಾಯ್ದಿರಿಸಿ ಡಿ.ಜಿ.ಎಸ್ ಅಂಡ್ ಡಿ ದರಪಟ್ಟಿ ಅನುಮೋದನೆಯಾದ ಕೂಡಲೇ ಯಾವ ಯಾವ ವಿಭಾಗಗಳಿಗೆ ಅತ್ಯಂತ ತುರ್ತು ಅವಶ್ಯಕತೆ ಇದೆಯೋ ಅಂತಹ ವಿಭಾಗಗಳಿಗೆ ಖರೀದಿಸಲು ಸಭೆಯು ಅನುಮೋದಿಸಿತು. ಅಂದಾಜು ಮೊತ್ತ ರೂ. 3.00 ಲಕ್ಷ (ಯೋಜನೆ ಲೆಕ್ಕಶೀರ್ಷಿಕೆಯಡಿಯಲ್ಲಿ) | ಸಂಸ್ಥೆಯ ವಿವಿಧ ವಿಭಾಗಗಳಿಗೆ ತುರ್ತು ಅವಶ್ಯವಿರುವ ಕಡೆ ಯು.ಪಿ.ಎಸ್ ಗಳು ಡಿ.ಜಿ.ಎಸ್&ಡಿ ದರಪಟ್ಟಿಯಲ್ಲಿರುವ ಮೆ॥ ಟೈಪ್‌ವೆಲ್ ಕಂಪ್ಯೂಟರ್, ಶಿವಮೊಗ್ಗ ಇವರಿಂದ ದಿ: 28/06/2013 ರಂದು ಖರೀದಿಸಲು ಆದೇಶ ನೀಡಲಾಗಿದ್ದು ಸದರಿ ಸಂಸ್ಥೆಯವರು ಈ ಯು.ಪಿ.ಎಸ್ ಗಳನ್ನು ಅಳವಡಿಸುವ ಕಾರ್ಯವನ್ನು ದಿ: 15/11/2013 ರಂದು ಪೂರ್ಣಗೊಳಿಸಿದ್ದು, ರೂ. 93257.00 ಗಳನ್ನು ಪಾವತಿಸಲು ಕ್ರಮವಹಿಸಲಾಗುವುದು. ಇನ್ನೂ ಅನೇಕ ವಿಭಾಗಗಳಲ್ಲಿ ಯು.ಪಿ.ಎಸ್. ಗಳು ಬೇಕೆಂದು ಬೇಡಿಕೆ ಪತ್ರ ಸಲ್ಲಿಸುತ್ತಿರುವುದರಿಂದ ಮೂಲ ಸರಬರಾಜು ಸಂಸ್ಥೆಯವರಿಂದ ಈ ಯು.ಪಿ.ಎಸ್ ಗಳ ಗುಣಮಟ್ಟದ ಬಗ್ಗೆ ಪರಿಶೀಲನಾ ವರದಿ ಬಂದ ನಂತರ ಅವಶ್ಯವಿರುವ ವಿಭಾಗಗಳಿಗೆ ಡಿ.ಜಿ.ಎಸ್&ಡಿ ದರಪಟ್ಟಿ ಮುಖಾಂತರ ಖರೀದಿಸಲು ಕ್ರಮವಹಿಸಲಾಗುವುದು. |
| 8 | **ಸಿಮ್ಸ್ ಸಂಸ್ಥೆ ಹಾಗೂ ಬೋಧನಾ ಮೆಗ್ಗಾನ್ ಆಸ್ಪತ್ರೆಯ ಯು.ಪಿ.ಎಸ್‌ಗಳ ವಾರ್ಷಿಕ ನಿರ್ವಹಣೆ ಬಗ್ಗೆ** | ಸಂಸ್ಥೆ ಹಾಗೂ ಬೋಧನಾ ಮೆಗ್ಗಾನ್ ಆಸ್ಪತ್ರೆಯಲ್ಲಿ ಲಭ್ಯವಿರುವ ಯು.ಪಿ.ಎಸ್‌ಗಳ ಸುಮಾರು ಆರು ವರ್ಷಗಳು ಹಳೆಯದಾಗಿದ್ದು ಉಚಿತ ಸೇವಾ ನಿರ್ವಹಣಾ ಅವಧಿಯು (ಗ್ಯಾರಂಟಿ) ಪೂರ್ಣಗೊಂಡಿದ್ದು ವಿಭಾಗಗಳಲ್ಲಿ ಮತ್ತು ಆಸ್ಪತ್ರೆಯಲ್ಲಿ ಪದೇ ಪದೇ ಯು.ಪಿ.ಎಸ್‌ಗಳು ಹಾಳಾಗುತ್ತಿರುವುದರಿಂದ ದೈನಂದಿನ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತಿರುವುದರಿಂದ ವಾರ್ಷಿಕ ನಿರ್ವಹಣೆ ನೀಡಲು ವಿಷಯವನ್ನು ಖರೀದಿ ಸಮಿತಿ ಅನುಮೋದನೆಗಾಗಿ ಮಂಡಿಸಲಾಯಿತು. | ಮಾನ್ಯ ನಿರ್ದೇಶಕರು ಮಾತನಾಡಿ ಇತ್ತೀಚೆಗೆ ಪವರ್ ಸಪ್ಲೈ ಸರಿಯಾಗಿಲ್ಲದಿರುವ ಕಾರಣ ಕಛೇರಿಯ ದೈನಂದಿನ ಕೆಲಸಕಾರ್ಯಗಳಿಗೆ ತೊಂದರೆಯಾಗುತ್ತಿರುವುದರಿಂದ ಆಸ್ಪತ್ರೆಯ ಮತ್ತು ಕಾಲೇಜು ವಿಭಾಗಗಳಲ್ಲಿ ಲಭ್ಯವಿರುವ ಯು.ಪಿ.ಎಸ್‌ಗಳ ಪಟ್ಟಿಯನ್ನು ತಯಾರಿಸಿ ಇವುಗಳಿಗೆ ತಗಲುವ ವಾರ್ಷಿಕ ನಿರ್ವಹಣಾ ಮೊತ್ತವನ್ನು ಅಂದಾಜಿಸಿ ದರಪಟ್ಟಿ ಅಥವಾ ಟೆಂಡರ್ ಪ್ರಕ್ರಿಯೆ ಮುಖಾಂತರ ವಾರ್ಷಿಕ ನಿರ್ವಹಣೆ ಬಗ್ಗೆ ನಿಯಮಾನುಸಾರ ಟೆಂಡರ್ ಪ್ರಕ್ರಿಯೆಯ ಮುಖಾಂತರ ಅಥವಾ ದರಪಟ್ಟಿ ಮುಖಾಂತರ ಖರೀದಿಸಲು ಸಭೆಯು ಅನುಮೋದಿಸಲಾಯಿತು. ಅಂದಾಜು ಮೊತ್ತ ರೂ. 80000/–(ಯೋಜನೇತರ ಲೆಕ್ಕಶೀರ್ಷಿಕೆಯಡಿಯಲ್ಲಿ) | ಸಂಸ್ಥೆ ಹಾಗೂ ಬೋಧನಾ ಮೆಗ್ಗಾನ್ ಆಸ್ಪತ್ರೆಯಲ್ಲಿ ಸುಮಾರು 5–6 ವರ್ಷಗಳ ಹಳೆಯದಾಗಿರುವ ಯು.ಪಿ.ಎಸ್.ಗಳ ವಾರ್ಷಿಕ ನಿರ್ವಹಣೆಯನ್ನು ನೀಡಲು ಮೂಲ ಸರಬರಾಜು ಸಂಸ್ಥೆಯವರಿಂದ ತಗಲುವ ಅಂದಾಜು ಮೊತ್ತವನ್ನು ತಿಳಿಸಲು ಸೂಚಿಸಲಾಗಿದೆ. ವರದಿ ಬಂದ ನಂತರ ಕ್ರಮವಹಿಸಲಾಗುವುದು. |
| 9 | **ಸಂಸ್ಥೆಯ ವಿವಿಧ ವಿಭಾಗಗಳಿಗೆ ಯು.ಪಿ.ಎಸ್ ಬ್ಯಾಟರಿಗಳನ್ನು ಖರೀದಿಸುವ ಬಗ್ಗೆ.** | ಸಂಸ್ಥೆ ಹಾಗೂ ಬೋಧನಾ ಮೆಗ್ಗಾನ್ ಆಸ್ಪತ್ರೆಯಲ್ಲಿ ಈಗಾಗಲೇ ಯು.ಪಿ.ಎಸ್ ಗಳನ್ನು | ಮುಖ್ಯ ಆಡಳಿತಾಧಿಕಾರಿಗಳು ಮಾತನಾಡಿ ಸಂಸ್ಥೆ ಹಾಗೂ ಆಸ್ಪತ್ರೆಯಲ್ಲಿ ಯು.ಪಿ.ಎಸ್‌ಗಳನ್ನು ಅಳವಡಿಸಿ ಸುಮಾರು | ಸಂಸ್ಥೆಯ ವಿಭಾಗಗಳಲ್ಲಿ ಹಾಗೂ ಬೊಧನಾ ಮೆಗ್ಗಾನ್ ಆಸ್ಪತ್ರೆಯಲ್ಲಿ ಕೆಲವು ಯು.ಪಿ.ಎಸ್.ಗಳು ಸರಿಯಾಗಿದ್ದು, ಬ್ಯಾಟರಿಗಳು |

| | | | | |
|---|---|---|---|---|
| | | ಅಳವಡಿಸಲಾಗಿದ್ದು, ಸುಮಾರು ಆರೇಳು ವರ್ಷಗಳು ಕಳೆದಿರುವುದರಿದ ಯು.ಪಿ.ಎಸ್‌ಗಳು ಪದೇ ಪದೇ ದುರಸ್ಥಿಗೆ ಬರುತ್ತಿರುತ್ತವೆ. ದುರಸ್ಥಿ ಮಾಡಿದ ಕೆಲವು ದಿನಗಳಲ್ಲಿಯೇ ಮತ್ತೆ ದುರಸ್ಥಿಗೆ ಬರುತ್ತಿರುತ್ತವೆ. ದುರಸ್ಥಿ ಮಾಡಲು ಸಾಧ್ಯವಿಲ್ಲದಿರುವ ಯು.ಪಿ.ಎಸ್ ಗಳನ್ನು ಸಂಪೂರ್ಣವಾಗಿ ಬದಲಿಸಲು ಹಾಗೂ ಅಗತ್ಯವಿರುವಲ್ಲಿ ಬ್ಯಾಟರಿಗಳನ್ನು ಮಾತ್ರ ಬದಲಿಸಲು ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು. | ಆರೇಳು ವರ್ಷ ಗತಿಸಿದ್ದು, ವಿವಿಧ ವಿಭಾಗಗಳಿಂದ ಆಗಾಗ್ಗೆ ದೂರುಗಳು ಬರುತ್ತಿರುವುದರಿಂದ ಈ ಬಗ್ಗೆ ಸದರಿ ಯು.ಪಿ.ಎಸ್.ಗಳು ದುರಸ್ಥಿಗೆ ಬರದಿದ್ದಲ್ಲಿ, ಪರಿಶೀಲಿಸಿ ದೃಢೀಕರಿಸಿ ಕಂಡಂ ಮಾಡಲು ಹಾಗೂ ಒಂದು ವೇಳೆ ದುರಸ್ಥಿ ಮಾಡಲು ಬರುವ ಯು.ಪಿ.ಎಸ್.ಗಳನ್ನು ದುರಸ್ಥಿಪಡಿಸಲು ಮತ್ತು ಕಂಡಂ ಆದ ಯು.ಪಿ.ಎಸ್. ಬ್ಯಾಟರಿ ಸಂಖ್ಯೆಗಳಿಗನುಗಣವಾಗಿ ಡಿ.ಜಿಎಸ್&ಡಿ ದರಪಟ್ಟಿ ಮುಖಾಂತರ ಇಲ್ಲದಿದ್ದಲ್ಲಿ ದರಪಟ್ಟಿ ಮುಖಾಂತರ ಖರೀದಿಸಲು ತೀರ್ಮಾನಿಸಲಾಯಿತು. ಅಂದಾಜು ಮೊತ್ತ ರೂ. 90000/– (ಯೋಜನೆ ಲೆಕ್ಕಶೀರ್ಷಿಕೆಯಡಿಯಲ್ಲಿ) | ಮಾತ್ರ ಹಾಳಾಗಿರುವುದರಿಂದ ಈ ಬ್ಯಾಟರಿಗಳ ಸಂಖ್ಯೆಯನ್ನು ಪರಿಶೀಲಿಸಿ, ದರಪಟ್ಟಿ ಮುಖಾಂತರ ಖರೀದಿಸಲು ಕ್ರಮವಹಿಸಲಾಗುವುದು. |
| 10 | **ಮುಖ್ಯ ಆಡಳಿತ ಕಛೇರಿಗೆ ಫ್ಯಾಕ್ಸ್ ಖರೀದಿಸುವ ಬಗ್ಗೆ.** | ಸಂಸ್ಥೆಯ ಮುಖ್ಯ ಆಡಳಿತ ಕಛೇರಿಯಲ್ಲಿ ಒಂದೇ ಫ್ಯಾಕ್ಸ್ ಯಂತ್ರವು ಲಭ್ಯವಿದ್ದು ಕೆಲವು ಸಂಧರ್ಭದಲ್ಲಿ ಫ್ಯಾಕ್ಸ್ ಯಂತ್ರವು ದುರಸ್ಥಿಗೆ ಬಂದಾಗ ಬದಲಾಗಿ ಇನ್ನೊಂದು ಫ್ಯಾಕ್ಸ್ ಯಂತ್ರವನ್ನು ಖರೀದಿಸಲು ವಿಷಯವನ್ನು ಸಭೆಗೆ ಮಂಡಿಸಲಾಯಿತು. | ಮಾನ್ಯ ನಿರ್ದೇಶಕರು ಮಾತನಾಡಿ ಸಂಸ್ಥೆಯಲ್ಲಿ ಒಂದೇ ಫ್ಯಾಕ್ಸ್ ಯಂತ್ರವು ಇರುವುದರಿಂದ ಕೆಲವು ಸಂದರ್ಭದಲ್ಲಿ ಈ ಯಂತ್ರವು ದುರಸ್ಥಿಗೆ ಬಂದಾಗ ಬೆಂಗಳೂರು ಕಾರ್ಯದರ್ಶಿಯವರು ಹಾಗೂ ಡಿ.ಎಂ.ಇ. ಕಛೇರಿಯಿಂದ ಫ್ಯಾಕ್ಸ್ ಕಳುಹಿಸಲು ತೊಂದರೆಯಾಗುತ್ತಿದೆ ಎಂದು ಹಲವಾರು ಬಾರಿ ಕಾರ್ಯದರ್ಶಿಯವರ ಕಛೇರಿಯಿಂದ ತಿಳಿಸಿರುವುದರಿಂದ ಬದಲಾಗಿ ಇನ್ನೊಂದು ಫ್ಯಾಕ್ಸ್ ಯಂತ್ರವು ಖರೀದಿಸಿದರೆ ಈ ತರಹದ ಸಮಸ್ಯೆಗಳು ಬರುವುದಿಲ್ಲ ಎಂದು ತಿಳಿಸಿದರು ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಮತ್ತೊಂದು ಫ್ಯಾಕ್ಸ್ ಯಂತ್ರವನ್ನು ನಿಯಮಾನುಸಾರ ಖರೀದಿಸಲು ತೀರ್ಮಾನಿಸಲಾಯಿತು. ಅಂದಾಜು ಮೊತ್ತ ರೂ. 20000/– (ಯೋಜನೆ ಲೆಕ್ಕಶೀರ್ಷಿಕೆಯಡಿಯಲ್ಲಿ) | ಮುಖ್ಯ ಆಡಳಿತ ಕಛೇರಿಗೆ ಫ್ಯಾಕ್ಸ್ ಯಂತ್ರವನ್ನು ಖರೀದಿಸಲು ದಿನಾಂಕ: 04/06/2013 ರಂದು ಅಧಿಸೂಚನೆ ಹೊರಡಿಸಲಾಗಿ, ಎಲ್–1 ಸಂಸ್ಥೆಯವರಾದ ಮೆ॥ ಟೈಪ್‌ವೆಲ್ ಕಂಪ್ಯೂಟರ್ಸ್, ಶಿವಮೊಗ್ಗ ಸಂಸ್ಥೆಯವರಿಂದ ಫ್ಯಾಕ್ಸ್ ಯಂತ್ರವನ್ನು ಖರೀದಿಸಲು ದಿ: 12/06/2013ರಂದು ಆದೇಶ ನೀಡಲಾಗಿದೆ. ಸದರಿಯವರು ಈ ಉಪಕರಣವನ್ನು ಅಳವಡಿಸುವ ಕಾರ್ಯವನ್ನು ಪೂರ್ಣಗೊಳಿಸಿರುತ್ತಾರೆ. ಬಿಲ್ ಮೊತ್ತ ರೂ. 16400.00 ಗಳಾಗಿದ್ದು ದಿನಾಂಕ: 20/08/2013 ರಂದು ಪಾವತಿಸಲಾಗಿರುತ್ತದೆ. (ಯೋಜನೆ ಲೆಕ್ಕ ಶೀರ್ಷಿಕೆಯಡಿ) |
| 11 | **ಬೋಧನಾ ಮೆಗ್ಗಾನ್ ಆಸ್ಪತ್ರೆಗೆ ಎಲ್.ಸಿ.ಡಿ ಪ್ರಾಜೆಕ್ಟರ್‌ಗಳನ್ನು ಖರೀದಿಸುವ ಬಗ್ಗೆ ಹಾಗೂ ಸಂಸ್ಥೆಯ ಬೋಧನಾ ಕೊಠಡಿಗಳಲ್ಲಿರುವ** | ಬೋಧನಾ ಮೆಗ್ಗಾನ್ ಆಸ್ಪತ್ರೆಯ ಅನಸ್ತೇಶಿಯಾ ವಿಭಾಗದ ಮುಖ್ಯಸ್ಥರು ಹೊಸದಾಗಿ ಎಲ್.ಸಿ.ಡಿ ಪ್ರಾಜೆಕ್ಟರ್‌ನ್ನು | ಮುಖ್ಯ ಆಡಳಿತಾಧಿಕಾರಿಗಳು ಅನಸ್ತೇಶಿಯಾ ವಿಭಾಗದ ಮುಖ್ಯಸ್ಥರ ಬೇಡಿಕೆ ಪತ್ರದಂತೆ ಹೊಸದಾಗಿ ಎಲ್.ಸಿ.ಡಿ ಪ್ರಾಜೆಕ್ಟರ್‌ನ್ನು ಡಿ.ಜಿ.ಎಸ್ | ಬೋಧನಾ ಮೆಗ್ಗಾನ್ ಆಸ್ಪತ್ರೆಯ ಅನಸ್ತೇಶಿಯಾ ವಿಭಾಗಕ್ಕೆ ಎಲ್.ಸಿ.ಡಿ ಪ್ರಾಜೆಕ್ಟರ್‌ನ್ನು ಡಿ.ಜಿ.ಎಸ್.&ಡಿ ದರಪಟ್ಟಿಯಲ್ಲಿ |

| | | | | |
|---|---|---|---|---|
| | **ಎಲ್.ಸಿ.ಡಿ ಪ್ರಾಜೆಕ್ಟರ್‌ಗಳನ್ನು ದುರಸ್ಥಿಪಡಿಸುವ ಬಗ್ಗೆ.** | ಖರೀದಿಸಿಕೊಡಲು ಬೇಡಿಕೆ ಪತ್ರ ಸಲ್ಲಿಸಿರುತ್ತಾರೆ ಹಾಗೂ ಕಾಲೇಜು ವಿಭಾಗದ ಬೋಧನಾ ಕೊಠಡಿಯಲ್ಲಿರುವ ಎಲ್.ಸಿ.ಡಿ ಪ್ರಾಜೆಕ್ಟರ್‌ನ್ನು ದುರಸ್ಥಿಪಡಿಸುವ ವಿಷಯವನ್ನು ಸಭೆಗೆ ಮಂಡಿಸಲಾಯಿತು. | ಅಂಡ್ ಡಿ ದರಪಟ್ಟಿಯಲ್ಲಿ ಲಭ್ಯವಿರುವುದರಿಂದ ಖರೀದಿಸಲು ವಿಭಾಗಗಳಿಗೆ ಕೆಲವು ಸಂದರ್ಭಗಳಲ್ಲಿ ಎಲ್.ಸಿ.ಡಿ ಪ್ರಾಜಕ್ಟರ್‌ನ ಅವಶ್ಯಕತೆ ಇರುವುದರಿಂದ ಡಿ.ಜಿ.ಎಸ್ ಅಂಡ್ ಡಿ ದರಪಟ್ಟಿಯಲ್ಲಿ ಖರೀದಿಸಬಹುದೆಂದು ಮತ್ತು ಹಾಲಿ ಇರುವ ಎಲ್.ಸಿ.ಡಿ ಪ್ರಾಜೆಕ್ಟರ್‌ನ್ನು ದುರಸ್ಥಿಪಡಿಸಲು ತೀರ್ಮಾನಿಸಲಾಯಿತು. ಅಂದಾಜು ಮೊತ್ತ ರೂ. 60000/- (ವಿದ್ಯಾರ್ಥಿಗಳ ಶುಲ್ಕ ನಿಧಿಯಡಿಯಲ್ಲಿ) | ಲಭ್ಯವಿರುವುದರಿಂದ ಮೆ॥ ಅಭಿಶೇಕ್ ಎಂಟರ್‌ಪ್ರೈಸೆಸ್, ಶಿವಮೊಗ್ಗ ಇವರಿಂದ ಖರೀದಿಸಲು ದಿ: 03/06/2013 ರಂದು ಆದೇಶವನ್ನು ನೀಡಲಾಗಿದೆ. ಸದರಿ ಉಪಕರಣವನ್ನು ಅಳವಡಿಸುವ ಕಾರ್ಯಪೂರ್ಣಗೊಂಡಿರುತ್ತದೆ. ಬಿಲ್ ಮೊತ್ತ ರೂ. 52086.00 ಗಳಾಗಿದ್ದು ದಿನಾಂಕ: 01/08/2013 ರಂದು ಬಿಲ್‌ನ್ನು ಪಾವತಿಸಲಾಗಿರುತ್ತದೆ. (ವಿದ್ಯಾರ್ಥಿಗಳ ಶುಲ್ಕ ನಿಧಿಯಿಂದ) |
| 12 | **ಸಂಸ್ಥೆಯ ಯು.ಪಿ.ಎಸ್ ಲ್ಯಾನ್ ಕೇಬಲ್ ಅಳವಡಿಕೆ ಬಗ್ಗೆ.** | ಸಂಸ್ಥೆಯ ಮುಖ್ಯ ಆಡಳಿತ ಕಛೇರಿಗೆ ಬೆಳಕಿನ ವ್ಯವಸ್ಥೆಗೆ ಹೊಸದಾಗಿ ಯು.ಪಿ.ಎಸ್‌ನ್ನು ಖರೀದಿಸಲಾಗಿರುತ್ತದೆ. ಈ ಯು.ಪಿ.ಎಸ್‌ನ ಲ್ಯಾನ್ ಕೇಬಲ್‌ನ್ನು ಅಳವಡಿಸಬೇಕಾಗಿದ್ದು ಇದಕ್ಕಾಗಿ ವಿಷಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದರು. | ಸಿಮ್ಸ್ ಸಂಸ್ಥೆಯ ಮುಖ್ಯ ಆಡಳಿತ ಕಛೇರಿಯಲ್ಲಿ ಇತ್ತೀಚೆಗೆ ವಿದ್ಯುತ್ ಕಡಿತದಿಂದಾಗಿ ಕಛೇರಿಯ ದೈನಂದಿನ ಕೆಲಸಕಾರ್ಯಗಳಿಗೆ ತುಂಬಾ ತೊಂದರೆಯಾಗುತ್ತಿರುವುದರಿಂದ ಬೆಳಕಿನ ವ್ಯವಸ್ಥೆಗಾಗಿ ಹೊಸದಾಗಿ ಯು.ಪಿ.ಎಸ್‌ನ್ನು ಖರೀದಿಸಿದ್ದು ಈ ಯು.ಪಿ.ಎಸ್‌ನ ಆಡಳಿತ ಕಛೇರಿಯ ಎಲ್ಲಾ ವಿಭಾಗಗಳಿಗೆ ಲ್ಯಾನ್ ಕೇಬಲ್‌ನ್ನು ಅಳವಡಿಸಲು ಅಂದಾಜು ಮೊತ್ತ 70,000/- ಆಗಲಿದ್ದು ನಿಯಮಾನುಸಾರ ದರಪಟ್ಟಿ ಅಹ್ವಾನಿಸಿ, ಅಳವಡಿಸಲು ತೀರ್ಮಾನಿಸಲಾಯಿತು. (ಯೋಜನೆ ಲೆಕ್ಕಶೀರ್ಷಿಕೆಯಡಿಯಲ್ಲಿ) | ಯು.ಪಿ.ಎಸ್ ಲ್ಯಾನ್ ಕೇಬಲ್ ಅಳವಡಿಸಲು ದರಪಟ್ಟಿ ಅಹ್ವಾನಿಸಿದ್ದು, ಎಲ್-1 ಸಂಸ್ಥೆಯವರಾದ ಮೆ॥ ರೇಣುಕಾ ಎಂಟರ್‌ಪ್ರೈಸೆಸ್, ಶಿವಮೊಗ್ಗ ಇವರಿಗೆ ದಿನಾಂಕ: 18/03/2013 ರಂದು ಆದೇಶ ನೀಡಲಾಗಿರುತ್ತದೆ. ಸದರಿ ಸಂಸ್ಥೆಯವರು ಲ್ಯಾನ್‌ಕೇಬಲ್ ಅಳವಡಿಸುವ ಕಾರ್ಯ ಪೂರ್ಣಗೊಳಿಸಿದ್ದು, ದಿ: 17/07/2013ರಂದು ಮೊತ್ತ ರೂ. 51744.00 ಗಳನ್ನು ಪಾವತಿಸಲು ಕ್ರಮಕೈಗೊಳ್ಳಲಾಗಿರುತ್ತದೆ. |
| 13 | **ಬೋಧನಾ ಮೆಗ್ಗಾನ್ ಆಸ್ಪತ್ರೆಯ ಎಕ್ಸ್-ರೇ ವಿಭಾಗಕ್ಕೆ ಕವರ್ಸ್‌ಗಳನ್ನು ಮುದ್ರಿಸಿಕೊಟ್ಟಿರುವ ಬಗ್ಗೆ.** | ಮೆಗ್ಗಾನ್ ಬೋಧನಾ ಆಸ್ಪತ್ರೆಗೆ ಎಕ್ಸ್‌ರೇ ಕವರ್ಸ್‌ನ್ನು ಮುದ್ರಿಸಿ, ಸರಬರಾಜು ಮಾಡಿರುವ ಬಗ್ಗೆ ವಿಷಯವನ್ನು ಖರೀದಿ ಸಮಿತಿಯ ಘಟನೋತ್ತರ ಅನುಮೋದನೆಗೆ ಮಂಡಿಸಲಾಯಿತು. | ಮೆಗ್ಗಾನ್ ಬೋಧನಾ ಆಸ್ಪತ್ರೆಯ ರೋಗಿಗಳಿಗೆ ಎಕ್ಸ್‌ರೇ ಕವರ್ಸ್‌ನ್ನು ಅತ್ಯಂತ ತುರ್ತು ಇರುವುದರಿಂದ ದರಪಟ್ಟಿಯ ಮುಖಾಂತರ ಮೆ॥ ವರದಾ ಪ್ರಿಂಟರ್ಸ್, ಶಿವಮೊಗ್ಗರವರು ಮುದ್ರಿಸಿ ಸರಬರಾಜು ಮಾಡಿದ್ದು, ಸಭೆಯು ಪರಿಶೀಲಿಸಿ, ಘಟನೋತ್ತರ ಅನುಮೋದನೆ ನೀಡಲಾಯಿತು. ಮೊತ್ತ ರೂ. 11175/- (ಯೋಜನೇತರ ಲೆಕ್ಕಶೀರ್ಷಿಕೆಯಡಿಯಲ್ಲಿ) | ಮೆಗ್ಗಾನ್ ಬೋಧನಾ ಆಸ್ಪತ್ರೆಗೆ ಎಕ್ಸ್‌ರೇ ಕವರ್ಸ್‌ನ್ನು ಮುದ್ರಿಸಿ, ಸರಬರಾಜು ಮಾಡಲು ಎಲ್-1 ಸಂಸ್ಥೆಯವರಾದ ಮೆ॥ ವರದ ಪ್ರಿಂಟರ್ ಶಿವಮೊಗ್ಗ ಇವರಿಗೆ ದಿನಾಂಕ:29/12/2012ರಂದು ಆದೇಶ ನೀಡಲಾಗಿದ್ದು,ಸರಬರಾಜು ಕಾರ್ಯ ಮುಗಿದಿದ್ದು ಸದರಿಯವರಿಗೆ 11175.00ಗಳನ್ನು ದಿನಾಂಕ: 08/03/2013 ರಂದು ಪಾವತಿಸಲು ಕ್ರಮಕೈಗೊಳ್ಳಲಾಗಿದೆ. |

| | | | | |
|---|---|---|---|---|
| 14 | **ಬೋಧನಾ ಮೆಗ್ಗಾನ್ ಆಸ್ಪತ್ರೆಗೆ 2013–14 ನೇ ಸಾಲಿಗೆ ಪಥ್ಯಾಹಾರ ಇ–ಟೆಂಡರ್ ಅಹ್ವಾನಿಸುವ ಬಗ್ಗೆ.** | 2011–12 ನೇ ಸಾಲಿನ ಮೆಗ್ಗಾನ್ ಬೋಧನಾ ಆಸ್ಪತ್ರೆಯ ರೋಗಿಗಳಿಗೆ ಸಿದ್ದ ಪಥ್ಯಾಹಾರದ ಟೆಂಡರ್ ಅವಧಿಯು ಮುಗಿದಿದ್ದು 2013–14 ನ ಸಾಲಿಗೆ ಇ–ಟೆಂಡರ್ ಪ್ರಕ್ರಿಯೆಯನ್ನು ಆಹ್ವಾನಿಸಲು ಅನುಮೋದನೆಗಾಗಿ ವಿಷಯವನ್ನು ಮಂಡಿಸಲಾಯಿತು. | ಮಾನ್ಯ ನಿರ್ದೇಶಕರು ಮಾತನಾಡಿ 2012–13 ನೇ ಸಾಲಿನಲ್ಲಿ ಬೋಧನಾ ಮೆಗ್ಗಾನ್ ಆಸ್ಪತ್ರೆಗೆ ರೋಗಿಗಳಿಗೆ ತಯಾರಿಸಿದ ಸಿದ್ದಪಥ್ಯಾಹಾರದ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು ಹಿಂದಿನ ಎಲ್–1 ಸಂಸ್ಥೆಯವರು ತಯಾರಿಸಿದ ಪಥ್ಯಾಹಾರವನ್ನು ಉತ್ತಮವಾಗಿ ನೀಡುತ್ತಿರುವುದಾಗಿ ರೋಗಿಗಳಿಂದ ಪ್ರಶಂಸೆ ಬರುತ್ತಿರುವುದರಿಂದ 2013–14 ನೇ ಸಾಲಿಗೂ ಸಹ ಅದೇ ರೀತಿಯಲ್ಲಿ ಇ–ಪ್ರಕ್ರಿಯೆ ಮುಖಾಂತರ ಟೆಂಡರ್ ಆಹ್ವಾನಿಸಲು ಮಾನ್ಯ ನಿರ್ದೇಶಕರು ಸಭೆಗೆ ಸೂಚಿಸಿದರು. ಈ ಬಗ್ಗೆ ಸಭೆಯು ಪರಿಶೀಲಿಸಿ, ಮುಂದಿನ ಒಂದು ವರ್ಷದ ಅವಧಿಯವರೆಗೆ ಸಿದ್ದಪಥ್ಯಾಹಾರವನ್ನು ಇ–ಟೆಂಡರ್ ಪ್ರಕ್ರಿಯೆ ಮುಖಾಂತರ ನಿರ್ವಹಿಸಲು ಸಭೆಯು ತೀರ್ಮಾನಿಸಿತು. (ಯೋಜನೇತರ ಲೆಕ್ಕಶೀರ್ಷಿಕೆಯಡಿಯಲ್ಲಿ) | 2012–13ನೇ ಸಾಲಿನಲ್ಲಿ ಸಂಸ್ಥೆಯ ಮೆಗ್ಗಾನ್ ಬೋಧನಾ ಜಿಲ್ಲಾ ಆಸ್ಪತ್ರೆಯ ಒಳರೋಗಿಗಳಿಗೆ ಸಿದ್ದಾಹಾರವನ್ನು ಸರಬರಾಜು ಮಾಡುವ ಟೆಂಡರ್ ಅವಧಿಯು ಮಾರ್ಚ್–13ಕ್ಕೆ ಮುಕ್ತಾಯಗೊಂಡಿದ್ದು, ಟೆಂಡರ್ ಪ್ರಕ್ರಿಯೆ ಆಗುವವರೆಗೆ ಅಥವಾ ಮುಂದಿನ ಆದೇಶದವರೆಗೆ ಹಿಂದಿನ ಟೆಂಡರ್ ದರದಲ್ಲಿ ಮುಂದುವರೆಸಲು ಟೆಂಡರ್‌ದಾರರಿಗೆ ಆದೇಶವನ್ನು ನೀಡಲಾಗಿತ್ತು.<br>ಅದರಂತೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ದಿನಾಂಕ: 25–04–2013ರಂದು ಟೆಂಡರ್ ಆಹ್ವಾನಿಸಲಾಗಿ ಟೆಕ್ನಿಕಲ್ ಬಿಡ್‌ನಲ್ಲಿ ಒಬ್ಬರು ಮಾತ್ರ ಅರ್ಹರಾಗಿದ್ದರಿಂದ ಅವರ ಪ್ರೈಸ್‌ಬಿಡ್‌ನ್ನು ತೆರೆಯುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಸರ್ಕಾರದ ಆದೇಶದನ್ವಯ ಮರುಟೆಂಡರ್ ಕರೆಯಲು ಅನುಮೋದನೆಯಾಗಿದ್ದ ಪ್ರಕಾರ ಮರುಟೆಂಡರ್‌ನ್ನು ದಿನಾಂಕ: 10–07–2013ರಂದು ಆಹ್ವಾನಿಸಲಾಗಿದ್ದು, ಅದರಲ್ಲಿ ಎಲ್–1ದಾರರಾದ ಪ್ರವೀಣ್ ನಾಯಕ್ ಎ., ಉಡುಪಿ ಉಪಹಾರ ಇವರು ಪ್ರತಿ ದಿನಕ್ಕೆ ಪ್ರತಿ ರೋಗಿಗೆ (ಪಥ್ಯಾಹಾರದ ರೋಗಿಗಳು, ಸಿ.ಎಂ.ಬಿ. ರೋಗಿಗಳು ಹಾಗೂ ಟಿ.ಬಿ. ರೋಗಿಗಳು ಸೇರಿ) ರೂ. 93/–ನ್ನು ನಮೂದಿಸಿದ್ದರಿಂದ, ಎಲ್–1ದಾರರೊಡನೆ ದರ ಸಂಧಾನ ನಡೆಸಿ ರೂ. 86/–ಕ್ಕೆ ಸರಬರಾಜು ಮಾಡುವ ಬಗ್ಗೆ ಸರ್ಕಾರದ ಅನುಮೋದನೆಯನ್ನು ಪಡೆದು ದಿನಾಂಕ: 16–08–2013ರಿಂದ 31–08–2014ರವರೆಗೆ ಅಥವಾ ಮುಂದಿನ ಆದೇಶದವರೆಗೆ ಇದರಲ್ಲಿ ಯಾವುದು ಮೊದಲೋ ಅದರಂತೆ ಸಿದ್ದಾಹಾರವನ್ನು ಸರಬರಾಜು ಮಾಡಲು ಪ್ರವೀಣ್ ಕುಮಾರ್, ಉಡುಪಿ ಉಪಹಾರ ಇವರಿಗೆ ಆರ್ಥಿಕ ಸಮಿತಿ ಸಭೆಯ ಘಟನೋತ್ತರ ಅನುಮೋದನೆ ಷರತ್ತಿಗೊಳಪಟ್ಟು ಸರಬರಾಜು ಆದೇಶವನ್ನು ನೀಡಲಾಗಿರುತ್ತದೆ. |
| 15 | **ಆಂಬ್ಯುಲೆನ್ಸ್ ಚೆಸ್ಸಿ ಬದಲಾಯಿಸುವ ಬಗ್ಗೆ.** | ಕೆ.ಎ–14–ಜಿ–455 ವಾಹನದ ಚೆಸ್ಸಿ ಹಾಳಾಗಿದ್ದು ಹೊಸದಾಗಿ ಚೆಸ್ಸಿಯನ್ನು ಅಳವಡಿಸಲು ಖರೀದಿ ಸಮಿತಿಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಲಾಯಿತು. | ಮಾನ್ಯ ನಿರ್ದೇಶಕರು ಮಾತನಾಡಿ ಕೆ.ಎ–14–ಜಿ–455 ವಾಹನದ ಚೆಸ್ಸಿ ಹಾಳಾಗಿರುವುದಾಗಿ ವಾಹನ ಚಾಲಕರು ತಿಳಿಸಿರುತ್ತಾರೆ. ಹಾಗೂ ಆರ್.ಟಿ.ಓ ರವರು | ಕೆ.ಎ–14–ಜಿ–455 ವಾಹನದ ಚೆಸ್ಸಿ ಹಾಳಾಗಿರುವುದರಿಂದ ಮೂಲ ಸರಬರಾಜು ಸಂಸ್ಥೆಯವರಿಗೆ ದುರಸ್ಥಿ ಮಾಡಲು ನಮ್ಮ ಕಛೇರಿ ಅಧಿಕೃತ ಜ್ಞಾಪನ ಸಂಖ್ಯೆ: |

| | | | | |
|---|---|---|---|---|
| | | | ಕೂಡಾ ಚೆಸ್ಸಿಯನ್ನು ಬದಲಾಯಿಸಲು ಸೂಚಿಸಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ ಅನುಮೋದಿಸಲಾಯಿತು. ಅಂದಾಜು ಮೊತ್ತ ರೂ. 130622/- (ಯೋಜನೇತರ ಲೆಕ್ಕಶೀರ್ಷಿಕೆಯಡಿಯಲ್ಲಿ) | ಶಿವೈವಿಸಂ/ಇಎಸ್‌ಟಿ-13/ಸಾರಿಗೆ3/88/13-14 ದಿ: 11/06/2013 ರಂದು ಪತ್ರ ಬರೆಯಾಲಾಗಿದ್ದು, ಸದರಿ ಸಂಸ್ಥೆಯವರಿಂದ ಯಾವುದೇ ಉತ್ತರ ಬಂದಿರುವುದಿಲ್ಲ. ಅದರಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು. |
| 16 | **ಬೋಧನಾ ಮೆಗ್ಗಾನ್ ಆಸ್ಪತ್ರೆಯ ವಿವಿಧ ಕ್ಲಿನಿಕಲ್ ವಿಭಾಗಗಳಿಗೆ ಇಕ್ವಿಪ್‌ಮೆಂಟ್‌ಗಳನ್ನು ಖರೀದಿಸುವ ಬಗ್ಗೆ.** | ಮೆಗ್ಗಾನ್ ಬೋಧನಾ ಆಸ್ಪತ್ರೆಯ 650 ಹಾಸಿಗೆಗಳಿಂದ 950 ಹಾಸಿಗೆಗಳಿಗೆ ಉನ್ನತೀಕರಣದ ಕಟ್ಟಡ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದ್ದು ಆಸ್ಪತ್ರೆಗೆ ಅತ್ಯವಶ್ಯವಿರುವ ಇಕ್ವಿಪ್‌ಮೆಂಟ್‌ಗಳನ್ನು ಪಾರದರ್ಶಕ ಖರೀದಿ ನಿಯಮದಂತೆ ಖರೀದಿಸಲು ಮಾನ್ಯ ಕಾರ್ಯದರ್ಶಿಯವರಿಂದ ಅನುಮೋದನೆಯನ್ನು ಪಡೆಯಲಾಗಿದ್ದು ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕ್ರಿಯೆಯನ್ನು ಆಹ್ವಾನಿಸಲು ವಿಷಯವನ್ನು ಸಭೆಯಲ್ಲಿ ಮಂಡಿಸಲಾಯಿತು. | ಮಾನ್ಯ ನಿರ್ದೇಶಕರು ಮಾತನಾಡಿ, ಮಾನ್ಯ ಕಾರ್ಯದರ್ಶಿಯವರ ಅನುಮೋದನೆಯಂತೆ ಹಾಗೂ ದಿನಾಂಕ: 22/06/2012ರ 9ನೇ ಹಣಕಾಸು ಮಂಡಳಿ ಸಭೆ ಅನುಮೋದನೆ ಮೇರೆಗೆ ಬೋಧನಾ ಮೆಗ್ಗಾನ್ ಆಸ್ಪತ್ರೆಗೆ ಆಯಾ ವಿಭಾಗಗಳಿಗೆ ಪಿ.ಜಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಅತ್ಯವಶ್ಯಕವಾಗಿ ಬೇಕಾಗಿರುವ ಯಂತ್ರೋಪಕರಣವನ್ನು ಹಾಗೂ ಪೀಠೋಪಕರಣಗಳನ್ನು ಆಯಾ ವಿಭಾಗಗಳ ಮುಖ್ಯಸ್ಥರೊಡನೆ ದಿನಾಂಕ: 07/05/2013ರಂದು ನಡೆದ ಸಭೆಯಲ್ಲಿ ಚರ್ಚಿಸಿದಂತೆ ಅವಶ್ಯಕ ಯಂತ್ರೋಪಕರಣಗಳು ಹಾಗೂ ಪೀಠೋಪಕರಣಗಳನ್ನು ನಿಯಮಾನುಸಾರ ಪಾರದರ್ಶಕ ನಿಯಮ ಪಾಲಿಸಿ ಇ-ಟೆಂಡರ್ ಪ್ರಕ್ರಿಯೆ ಮುಖಾಂತರ ಖರೀದಿಸಲು ಸಭೆಯು ತೀರ್ಮಾನಿಸಲಾಯಿತು. ಅಂದಾಜು ಮೊತ್ತ ರೂ. 12.58 ಲಕ್ಷ (ಯೋಜನೇತರ ಲೆಕ್ಕಶೀರ್ಷಿಕೆಯಡಿಯಲ್ಲಿ) | ಸಿಮ್ಸ್ ಮತ್ತು ಮೆಗ್ಗಾನ್ ಬೋಧನಾ ಆಸ್ಪತ್ರೆಯ ಅವಶ್ಯಕ ಯಂತ್ರೋಪಕರಣಗಳು ಹಾಗೂ ಪೀಠೋಪಕರಣಗಳನ್ನು ನಿಯಮಾನುಸಾರ ಪಾರದರ್ಶಕ ನಿಯಮ ಪಾಲಿಸಿ ಇ-ಟೆಂಡರ್ ಪ್ರಕ್ರಿಯೆ ಮುಖಾಂತರ ಖರೀದಿಸಲು ಕ್ರಮವಹಿಸಲಾಗುತ್ತಿದೆ. |
| 17 | **ಬಯೋಮೆಡಿಕಲ್ ವೇಸ್ಟ್ ಮ್ಯಾನೇಜ್‌ಮೆಂಟ್‌ಗೆ ಅತ್ಯವಶ್ಯವಿರುವ ಸರ್ಜಿಕಲ್ ಸಾಮಗ್ರಿಗಳನ್ನು ಖರೀದಿಸುವ ಬಗ್ಗೆ.** | ಬಯೋಮೆಡಿಕಲ್ ವೇಸ್ಟ್ ಮ್ಯಾನೇಜ್‌ಮೆಂಟ್ ದೈನಂದಿನ ಕೆಲಸಕಾರ್ಯಗಳಿಗೆ ಅತ್ಯವಶ್ಯವಿರುವಂತಹ ಸರ್ಜಿಕಲ್ ಬಿನ್, ಡ್ರೆಸಿಂಗ್ ಟ್ರಾಲಿ, ಟ್ರೀಟ್‌ಮೆಂಟ್ ಟ್ರಾಲಿ, ಕಲೆಕ್ಷನ್ ಟ್ರಾಲಿ, ಬೆಡ್ | ಮಾನ್ಯ ನಿರ್ದೇಶಕರು ಮಾತನಾಡಿ ಬಯೋಮೆಡಿಕಲ್ ವೇಸ್ಟ್ ಮ್ಯಾನೇಜ್‌ಮೆಂಟ್ ಕಾರ್ಯವು ಯಾವುದೇ ಅಡೆತಡೆ ಇಲ್ಲದೆ ಉತ್ತಮವಾಗಿ ಕಾರ್ಯನಿರ್ವಹಿಸಬೇಕಾಗಿರುತ್ತದೆ. ಆದ್ದರಿಂದ | ಬಯೋಮೆಡಿಕಲ್ ವೇಸ್ಟ್ ಮ್ಯಾನೇಜ್‌ಮೆಂಟ್ ದೈನಂದಿನ ಕೆಲಸಕಾರ್ಯಗಳಿಗೆ ಅತ್ಯವಶ್ಯವಿರುವಂತಹ ಸಾಮಾಗ್ರಿಗಳನ್ನು ಹಾಗೂ ಇತರೆ ವಿಭಾಗಗಳಿಗೆ ತುರ್ತು ಅವಶ್ಯವಿರುವ |

| | | | | |
|---|---|---|---|---|
| | | ಪಾನ್, ಯೂರಿನ್ ಕ್ಯಾನ್, ಡಸ್ಟ್‌ಬಿನ್ಸ್, ಟ್ಯೂಬ್‌ಗಳನ್ನು ಅತ್ಯಂತ ತುರ್ತಾಗಿ ಖರೀದಿಸಬೇಕಾಗಿದೆ ಎಂದು ವಿಭಾಗದ ಮುಖ್ಯಸ್ಥರು ಬೇಡಿಕೆ ಪತ್ರವನ್ನು ಸಲ್ಲಿಸಿರುತ್ತಾರೆ. ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. | ವಿಭಾಗದ ಮುಖ್ಯಸ್ಥರು ಕೋರಿರುವ ಸರ್ಜಿಕಲ್ ಸಾಮಗ್ರಿಗಳ ಅಂದಾಜು ಮೊತ್ತ 5 ಲಕ್ಷದ ಮಿತಿಯೊಳಗೆ ಬರುವಂತಿದ್ದರೆ ಪಾರದರ್ಶಕ ಖರೀದಿ ನಿಯಮ ಅನುಸರಿಸಿ, ಲೋಕಲ್ ಟೆಂಡರ್ ಆಹ್ವಾನಿಸಿ ಖರೀದಿಸಬಹುದೆಂದು ಸೂಚಿಸಿದ ಪ್ರಕಾರ ಸಭೆಯು ಅನುಮೋದಿಸಿತು. (ಯೋಜನೇತರ ಲೆಕ್ಕಶೀರ್ಷಿಕೆಯಡಿಯಲ್ಲಿ) | ಉಪಕರಣಗಳನ್ನು ಖರೀದಿಸುವ ಅಂದಾಜು ಮೊತ್ತ 5.00 ಲಕ್ಷ ಮೀರಿದ್ದರಿಂದ ಪಾರದರ್ಶಕ ಖರೀದಿ ನಿಯಮದಡಿ ಅಲ್ಪಾವಧಿ ಇ–ಟೆಂಡರ್ ಮುಖಾಂತರ ದಿ:27/07/2013ರಂದು ಅಧಿಸೂಚನೆ ಹೊರಡಿಸಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ ಮೂರು ಸಂಸ್ಥೆಯವರು ಭಾಗವಹಿಸಿರುತ್ತಾರೆ. ಮೆ॥ ಬಯೋಮೆಡಿಕ್ಸ್, ಬೆಂಗಳೂರು, ಮೆ॥ ಸುದರ್ಶನ್ ಟ್ರೇಡರ್ಸ್, ಶಿವಮೊಗ್ಗ, ಮೆ॥ ಶ್ರೀ ವೆಂಕಟೇಶ್ವರ ಎಂಟರ್‌ಪ್ರೈಸೆಸ್, ಬೆಂಗಳೂರು ಇವರುಗಳು ಆಯಾ ಉಪಕರಣಗಳನ್ವಯ ಎಲ್–1 ಆಗಿದ್ದು ಸದರಿ ಸಂಸ್ಥೆಯವರಿಗೆ ದಿ: 22/08/2013 ರಂದು ಸರಬರಾಜು ಆದೇಶ ನೀಡಲಾಗಿದ್ದು, ಸರಬರಾಜು ಕಾರ್ಯ ಪ್ರಗತಿಯಲ್ಲಿರುತ್ತದೆ. ಸರಬರಾಜು ಕಾರ್ಯ ಪೂರ್ಣಗೊಂಡ ನಂತರ ನಿಯಮಾನುಸಾರ ಪಾವತಿಸಲು ಕ್ರಮವಹಿಸಲಾಗಿದೆ. |
| 18 | ಮೈಕ್ರೋ ಬಯಾಲಜಿ ಮತ್ತು ಬಯೋಕೆಮಿಸ್ಟ್ರಿ ವಿಭಾಗಳಿಗೆ ಕೂಲರ್ ಖರೀದಿಸುವ ಬಗ್ಗೆ. | ಮೈಕ್ರೋಬಯಾಲಜಿ ಮತ್ತು ಬಯೋಕೆಮಿಸ್ಟ್ರಿ ವಿಭಾಗಗಳ ಮುಖ್ಯಸ್ಥರು ತಮ್ಮ ವಿಭಾಗಗಳಲ್ಲಿ ರೋಗಿಗಳ ವಿವಿಧ ಟೆಸ್ಟ್‌ಗಳಿಗಾಗಿ ಸ್ಯಾಂಪಲ್ಸ್‌ನ್ನು ಹಾಗೂ ಕೆಲವು ರಾಸಾಯನಿಕಗಳನ್ನು ಕೂಲರ್‌ನಲ್ಲಿ ಇರಿಸಬೇಕಾಗಿರುವುದರಿಂದ ಹಾಲಿ ಇರುವ ಕೂಲರ್‌ಗಳು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲವಾದ್ದರಿಂದ ಹೊಸದಾಗಿ ಒಂದು ಕೂಲರ್‌ನ್ನು ಖರೀದಿಸಿಕೊಡಲು ಬೇಡಿಕೆ ಪತ್ರವನ್ನು ಸಲ್ಲಿಸಿ, ಪುನಃ ಸಭೆಯಲ್ಲಿ ವಿಷಯ ಮಂಡಿಸಲಾಯಿತು. | ಮೈಕ್ರೋಬಯಾಲಜಿ ಮತ್ತು ಬಯೋಕೆಮಿಸ್ಟ್ರಿ ವಿಭಾಗಗಳ ಮುಖ್ಯಸ್ಥರು ಬೇಡಿಕೆಯಲ್ಲಿ ಹಾಲಿ ಇರುವ ಕೂಲರ್‌ಗಳು ಹಳೆಯದಾಗಿದ್ದು, ಸಮರ್ಪಕವಾಗಿ ಇರುವುದಿಲ್ಲ. ಸದರಿ ಕೂಲರ್‌ಗಳನ್ನು 2006–07 ನೇ ಸಾಲಿನಲ್ಲಿ ಖರೀದಿಸಿದ್ದು ಇವುಗಳ ದುರಸ್ಥಿಗೆ ಅತ್ಯಧಿಕ ಮೊತ್ತ ಸಂದಾಯ ಮಾಡಬೇಕಾಗಿರುವುದರಿಂದ ದುರಸ್ಥಿಗೆ ಬರುವಂತಹವುಗಳನ್ನು ದುರಸ್ಥಿಪಡಿಸಿ ಹೊಸದಾಗಿ ಎರಡು ಕೂಲರ್‌ನ್ನು ನಿಯಮಾನುಸಾರ ಖರೀದಿ ನಿಯಮ ಪಾಲಿಸಿ, ಖರೀದಿಸಲು ತೀರ್ಮಾನಿಸಲಾಯಿತು. ಅಂದಾಜು ಮೊತ್ತ ರೂ. 60000/– (ಯೋಜನೆ ಲೆಕ್ಕಶೀರ್ಷಿಕೆಯಡಿಯಲ್ಲಿ) | ಮೈಕ್ರೋಬಯಾಲಜಿ ಮತ್ತು ಬಯೋಕೆಮಿಸ್ಟ್ರಿ ವಿಭಾಗಗಳಿಗೆ ಕೂಲರ್‌ಗಳನ್ನು ಖರೀದಿಸಲು ದಿನಾಂಕ: 04/06/2013 ರಂದು ಅಧಿಸೂಚನೆ ಹೊರಡಿಸಲಾಗಿದ್ದು ಎಲ್–1 ಸಂಸ್ಥೆಯವರಾದ ಮೆ॥ ಸುದರ್ಶನ್ ಟ್ರೇಡರ್ಸ್, ಶಿವಮೊಗ್ಗ ಇವರಿಗೆ ದಿ: 26/06/2013 ರಂದು ಸರಬರಾಜು ಆದೇಶ ನೀಡಲಾಗಿರುತ್ತದೆ. ಸದರಿ ಸಂಸ್ಥೆಯವರು ಸರಬರಾಜು ಕಾರ್ಯಪೂರ್ಣಗೊಳಿಸಿದ್ದು, ದಿ: 16/09/2013ರಂದು ಮೊತ್ತ ರೂ. 91800/–ಗಳನ್ನು ಪಾವತಿಸಲಗಿದೆ. |
| 19 | **ಲ್ಯಾಪ್‌ಟಾಪ್‌ಗಳನ್ನು ಖರೀದಿಸುವ ಬಗ್ಗೆ.** | ಸಂಸ್ಥೆಯ ಬೋಧನಾ ಕೊಠಡಿಗಳಿಗೆ, ಕಛೇರಿ ಕೆಲಸಕಾರ್ಯಗಳಿಗೆ ಹಾಗೂ | ಬೋಧನಾ ಆಸ್ಪತ್ರೆಯಲ್ಲಿ ಕೆಲವು ಬಹುಮುಖ್ಯ ಮಾಹಿತಿಗಳನ್ನು ಸಂಗ್ರಹಿಸಿಡಲು | ಬೋಧನಾ ಮೆಗ್ಗಾನ್ ಆಸ್ಪತ್ರೆ, ಸಂಸ್ಥೆಯ ಮುಖ್ಯ ಆಡಳಿತ ಕಛೇರಿ ಹಾಗೂ ಸಂಸ್ಥೆಯ |

| | | | | |
|---|---|---|---|---|
| | | ವೈದ್ಯಕೀಯ ಅಧೀಕ್ಷಕರ ಕಛೇರಿಗೆ ಲ್ಯಾಪ್‌ಟಾಪ್‌ಗಳ ಅವಶ್ಯಕತೆ ಇರುವುದರಿಂದ ಇವುಗಳನ್ನು ಖರೀದಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. | ವೈದ್ಯಕೀಯ ಅಧೀಕ್ಷಕರಿಗೆ ಲ್ಯಾಪ್‌ಟಾಪ್ ಅವಶ್ಯಕತೆ ಇರುವುದಾಗಿ ಹಾಗೂ ಸಂಸ್ಥೆಯ ಬೋಧನಾ ಕೊಠಡಿಗಳಿಗೆ ಲ್ಯಾಪ್‌ಟಾಪ್‌ಗಳ ಅವಶ್ಯಕತೆ ಇದೆ ಎಂದು ಉಪನ್ಯಾಸಕರು ತಿಳಿಸುತ್ತಿರುವುದರಿಂದ ನಾಲ್ಕು ಬೋಧನಾ ಕೊಠಡಿಗಳಿಗೆ ಮತ್ತು ಸಂಸ್ಥೆಯ ಮುಖ್ಯ ಆಡಳಿತ ಕಛೇರಿಯ ಕಛೇರಿ ಕೆಲಸದ ಉಪಯೋಗಕ್ಕಾಗಿ ಒಂದು, ಹೈ ಕಾನ್ಫಿಗರೇನ್ ಮಾದರಿಯ ಎಂಟು ಲ್ಯಾಪ್‌ಟಾಪ್‌ಗಳನ್ನು ಡಿ.ಜಿ.ಎಸ್. ಅಂಡ್ ಡಿ ದರಪಟ್ಟಿಯಲ್ಲಿ ಖರೀದಿಸಲು ಸಭೆಯು ತೀರ್ಮಾನಿಸಲಾಯಿತು. ಅಂದಾಜು ಮೊತ್ತ ರೂ. 3.20 ಲಕ್ಷ (ಯೋಜನೆ ಲೆಕ್ಕಶೀರ್ಷಿಕೆಯಡಿಯಲ್ಲಿ) | ವಿವಿಧ ವಿಭಾಗಗಳಿಗೆ ಅವಶ್ಯವಿರುವ ಲ್ಯಾಪ್‌ಟಾಪ್‌ಗಳನ್ನು ಡಿ.ಜಿ.ಎಸ್&ಡಿ. ದರಪಟ್ಟಿಯಲ್ಲಿ ಲಭ್ಯವಿರುವ ಮೆ॥ ಟೈಪ್‌ವೆಲ್ ಕಂಪ್ಯೂಟರ್ಸ್, ಶಿವಮೊಗ್ಗರವರಿಗೆ ದಿ: 26/03/2013 ರಂದು ಆದೇಶ ನೀಡಲಾಗಿದ್ದು, ಸದರಿ ಸಂಸ್ಥೆಯವರು ಸರಬರಾಜು ಕಾರ್ಯಪೂರ್ಣಗೊಳಿಸಿದ್ದು, ದಿ: 03/08/2013 ರಂದು ರೂ. 371360/- ಗಳನ್ನು ಸದರಿ ಸಂಸ್ಥೆಯವರಿಗೆ ಪಾವತಿಸಲಾಗಿರುತ್ತದೆ. |
| 20 | **ಕಂಪ್ಯೂಟರ್ ಮತ್ತು ಪ್ರಿಂಟರ್ಸ್‌ಗಳನ್ನು ಖರೀದಿಸುವ ಬಗ್ಗೆ.** | ಸಿಮ್ಸ್ ಸಂಸ್ಥೆಗೆ ಹಾಗೂ ಮೆಗ್ಗಾನ್ ಬೋಧನಾ ಆಸ್ಪತ್ರೆಗೆ ಡಿ.ಜಿ.ಎಸ್. ಅಂಡ್ ಡಿ ದರಪಟ್ಟಿಯ ಮುಖಾಂತರ ಕಂಪ್ಯೂಟರ್ ಹಾಗೂ ಪ್ರೀಂಟರ್ಸ್‌ಗಳನ್ನು ಖರೀದಿಸಲು ಅನುಮೋದನೆಗಾಗಿ ವಿಷಯವನ್ನು ಮಂಡಿಸಲಾಗಿದೆ. | ಮುಖ್ಯ ಆಡಳಿತ ಕಛೇರಿಯ ಪಾರ್ಟಿಷಿಯನ್ ಕಂಪರ್ಟ್‌ಮೆಂಟ್ ನವೀಕರಿಸಿರುವುದರಿಂದ ಪ್ರತಿಯೊಬ್ಬ ವಿಷಯ ನಿರ್ವಾಹಕರಿಗೆ ಒಂದು ಗಣಕ ಯಂತ್ರದ ಅವಶ್ಯಕತೆ ಇದ್ದು, ಅನುದಾನದ ಅವಶ್ಯಕತೆಗೆ ಅನುಗುಣವಾಗಿ ಡಿ.ಜಿ.ಎಸ್&ಡಿ ದರಪಟ್ಟಿ ಮುಖಾಂತರ 15 ಕಂಪ್ಯೂಟರ್ ಮತ್ತು ಪ್ರಿಂಟರ್ಸ್‌ಗಳನ್ನು (ಅಂದಾಜು ಮೊತ್ತ 6,75,000) (ಬ್ಯಾಕ್ ಟು ಬ್ಯಾಕ್ ಪ್ರಿಂಟ್) ಖರೀದಿಸಲು ಸಭೆಯು ಅನುಮೋದಿಸಿತು. (ಯೋಜನೆ ಲೆಕ್ಕಶೀರ್ಷಿಕೆಯಡಿಯಲ್ಲಿ) | ಮೊದಲನೇ ಹಂತವಾಗಿ 10 ಕಂಪ್ಯೂಟರ್‌ಗಳನ್ನು ಡಿ.ಜಿ.ಎಸ್&ಡಿ ದರಪಟ್ಟಿ ಮುಖಾಂತರ ಮೆ॥ ರೇಣುಕಾ ಎಂಟರ್‌ಪ್ರೈಸೆಸ್, ಶಿವಮೊಗ್ಗ ಇವರಿಂದ ದಿನಾಂಕ: 27/07/2013 ರಂದು ಆದೇಶ ನೀಡಿ, ಖರೀದಿಸಲಾಗಿದ್ದು, ಬಿಲ್ ಮೊತ್ತ ರೂ. 395362/- ಗಳನ್ನು ದಿನಾಂಕ: 03/09/2013ರಂದು ಸದರಿ ಸಂಸ್ಥೆಯವರಿಗೆ ಪಾವತಿಸಲಾಗಿರುತ್ತದೆ. (ಯೋಜನೆ ಲೆಕ್ಕಶೀರ್ಷಿಕೆಯಡಿಯಲ್ಲಿ) |
| 21 | **ಡಯಾಲಿಸಿಸ್ ವಿಭಾಗದ ಕೆಥೆಟರ್ ಅಸಸರಿಸ್‌ಗಳನ್ನು ಖರೀದಿಸುವ ಬಗ್ಗೆ.** | ಮೆಗ್ಗಾನ್ ಬೋಧನಾ ಆಸ್ಪತ್ರೆಯ ಡಯಾಲಿಸಿಸ್ ವಿಭಾಗಕ್ಕೆ 2012-13 ನೇ ಸಾಲಿಗೆ ಇ-ಟೆಂಡರ್ ಆಹ್ವಾನಿಸಿ ಡಯಾಲಿಸಿಸ್ ಕೆಥೆಟರ್‌ಗಳನ್ನು ಖರೀದಿಸಲಾಗಿರುತ್ತದೆ. ಈ ಕೆಥೆಟರ್‌ಗೆ ಅವಶ್ಯವಿರುವ ಅಸಸರಿಸ್‌ಗಳನ್ನು ಖರೀದಿಸಲು ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. | ಮೆಗ್ಗಾನ್ ಬೋಧನಾ ಆಸ್ಪತ್ರೆಯ ಡಯಾಲಿಸಿಸ್ ವಿಭಾಗಕ್ಕೆ ಅವಶ್ಯವಿರುವ ರಾಸಾಯನಿಕಗಳು ಮತ್ತು ರೀಏಜೆಂಟ್ಸ್ ಹಾಗೂ ಇತರೆ ಸಾಮಗ್ರಿಗಳನ್ನು 2012-13 ನೇ ಸಾಲಿಗೆ ಇ-ಟೆಂಡರ್ ಪ್ರಕ್ರಿಯೆ ಮುಖಾಂತರ ಖರೀದಿಸಲಾಗಿರುತ್ತದೆ. ಆದರೆ ಕೆಥೆಟರ್‌ಗೆ ಅವಶ್ಯವಿರುವ ಅಸೆಸರೀಸ್ | ಡಯಾಲಿಸಿಸ್ ಅಸಸರೀಸ್‌ಗಳನ್ನು ಖರೀದಿಸಲು ದಿ: 07/09/2013 ರಂದು ಅಧಿಸೂಚನೆ ಹೊರಡಿಸಿದ್ದು, ಎಲ್-1 ಸಂಸ್ಥೆಯವರಾದ ಮೆ॥ ಆರ್.ಎಸ್. ಎಂಟರ್‌ಪ್ರೈಸೆಸ್, ಬೆಂಗಳೂರು ಇವರಿಗೆ ಸರಬರಾಜು ಆದೇಶ ನೀಡಲಾಗಿದ್ದು ಸದರಿ ಸಂಸ್ಥೆಯವರು ಸರಬರಾಜು ಕಾರ್ಯ |

| | | | | |
|---|---|---|---|---|
| | | | ಸಾಮಗ್ರಿಗಳು (Guider, Dialector, Dressing materials) ಇ-ಟೆಂಡರ್‌ನಲ್ಲಿ ನಮೂದಿಸದೇ ಇರುವುದರಿಂದ ವಿಭಾಗದ ಮುಖ್ಯಸ್ಥರು ಈ ಅಸೆಸರೀಸ್‌ಗಳನ್ನು ಖರೀದಿಸಲು ಬೇಡಿಕೆ ಪತ್ರ ಸಲ್ಲಿಸಿರುತ್ತಾರೆ. ಆದ್ದರಿಂದ ಸದರಿ ಸಾಮಾಗ್ರಿಗಳನ್ನು ಒಂದು ಲಕ್ಷದ ಒಳಗೆ ಆದಲ್ಲಿ ದರಪಟ್ಟಿ ಆಧಾರದ ಮೇಲೆ, ರೂ ಒಂದು ಲಕ್ಷದ ಮೇಲೆ ಆದಲ್ಲಿ ಟೆಂಡರ್ ಮೂಲಕ ಖರೀದಿಸಲು ತೀರ್ಮಾನಿಸಲಾಯಿತು. ಅಂದಾಜು ಮೊತ್ತ ರೂ. 85000/- (ಯೋಜನೇತರ ಲೆಕ್ಕಶೀರ್ಷಿಕೆಯಡಿಯಲ್ಲಿ) | ಮುಗಿಸಿದ ನಂತರ ಹಣ ಪಾವತಿಸಲು ಕ್ರಮವಹಿಸಲಾಗುವುದು. |
| 22 | **ರಾಸಾಯನಿಕಗಳ ಇ-ಟೆಂಡರ್ ಆಹ್ವಾನಿಸುವ ಬಗ್ಗೆ.** | ಸಂಸ್ಥೆಯ ಕಾಲೇಜು ವಿಭಾಗಗಳ ಲ್ಯಾಬ್‌ಗಳಿಗೆ ವಿದ್ಯಾರ್ಥಿಗಳ ಪ್ರಾಯೋಗಿಕ ತರಗತಿಗಳಿಗೆ ವಾರ್ಷಿಕವಾಗಿ ಅವಶ್ಯವಿರುವ ರಾಸಾಯನಿಕಗಳನ್ನು ಟೆಂಡರ್ ಅಹ್ವಾನಿಸಲು ವಿಷಯವನ್ನು ಸಭೆಯ ಅನುಮೋದನೆಗೆ ಮಂಡಿಸಲಾಯಿತು. | ಸಂಸ್ಥೆಯ ಕಾಲೇಜು ವಿಭಾಗಗಳಿಗೆ ರಾಸಾಯನಿಕಗಳನ್ನು 2012-13 ನೇ ಸಾಲಿನಲ್ಲಿ ಟೆಂಡರ್ ಆಹ್ವಾನಿಸಿ, ಖರೀದಿಸಲಾಗಿದೆ. 2013-14 ನೇ ಸಾಲಿಗೆ ವಿದ್ಯಾರ್ಥಿಗಳ ಪ್ರಾಯೋಗಿಕ ತರಗತಿಗೆ ಅವಶ್ಯವಿರುವ ರಾಸಾಯನಿಕಗಳನ್ನು ಖರೀದಿಸಲು ನಿಯಮಾನುಸಾರ ಟೆಂಡರ್ ಅಹ್ವಾನಿಸಲು ತೀರ್ಮಾನಿಸಲಾಯಿತು. ಅಂದಾಜು ಮೊತ್ತ ರೂ. 35.00 ಲಕ್ಷ (ವಿದ್ಯಾರ್ಥಿಗಳ ಶುಲ್ಕನಿಧಿಯಿಂದ ಪಾವತಿಸಲಾಗುವುದು) | 2013-14 ನೇ ಸಾಲಿಗೆ ಸಂಸ್ಥೆಯ ವಿವಿಧ ವಿಭಾಗಗಳ ವಿದ್ಯಾರ್ಥಿಗಳ ಪ್ರಾಯೋಗಿಕ ತರಗತಿಗೆ ಅವಶ್ಯವಿರುವ ರಾಸಾಯನಿಕಗಳನ್ನು ಇ-ಟೆಂಡರ್ ಮೂಲಕ ಖರೀದಿಸಲು ದಿ:09/07/2013 ರಂದು ಅಧಿಸೂಚನೆ ಹೊರಡಿಸಲಾಗಿ ಇ-ಟೆಂಡರ್‌ನಲ್ಲಿ ಮೂರು ಸಂಸ್ಥೆಯವರು ಆಯ್ಕೆಯಾಗಿದ್ದು, ಆಯಾ ರಾಸಾಯನಿಕಗಳಿಗೆ ಎಲ್-1 ಅಗಿರುವ ಮೆ॥ ದ್ರುಮುಖ ಎಂಟರ್‌ಪ್ರೈಸೆಸ್, ಶಿವಮೊಗ್ಗ, ಮೆ॥ ಜೈನ್ ಸ್ಪೋರ್ಟ್ಸ್& ಸೈಂಟಿಫಿಕ್, ಶಿವಮೊಗ್ಗ ಮತ್ತು ಮೆ॥ ಶ್ರೀ ವೆಂಕಟೇಶ್ವರ ಎಂಟರ್‌ಪ್ರೈಸೆಸ್, ಬೆಂಗಳೂರು ಇವರಿಗೆ ದಿ:20/09/2013ರಂದು ಸರಬರಾಜು ಆದೇಶ ನೀಡಲಾಗಿದ್ದು, ಸರಬರಾಜು ಕಾರ್ಯ ಪೂರ್ಣಗೊಂಡ ನಂತರ ಹಣ ಪಾವತಿಸಲು ಕ್ರಮವಹಿಸಲಾಗುವುದು. |
| 23 | **ಸಂಸ್ಥೆಯ ಕಾಲೇಜು ವಿಭಾಗಗಳ ಪಿ.ಜಿ ಕೋರ್ಸ್‌ಗಳಿಗೆ ಉಪಕರಣಗಳನ್ನು ಖರೀದಿಸುವ ಬಗ್ಗೆ.** | ಸಂಸ್ಥೆಯ ಫಾರ್ಮಕಾಲಜಿ ಮತ್ತು ಫಿಜಿಯಾಲಜಿ ವಿಭಾಗಗಳಲ್ಲಿ ಈಗಾಗಲೇ ಪಿ.ಜಿ. ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಸದರಿ ವಿಭಾಗಗಳ ಮುಖ್ಯಸ್ಥರು ಹಾಗೂ | ಸಂಸ್ಥೆಯ ಕಾಲೇಜು ವಿಭಾಗಗಳಲ್ಲಿ ಈಗಾಗಲೇ ಪಿ.ಜಿ. ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಆ ವಿಭಾಗಗಳಲ್ಲಿ ವ್ಯಾಸಂಗಕ್ಕೆ ಅತ್ಯವಶ್ಯಕವಾಗಿ ಬೇಕಾಗಿರುವ ಉಪಕರಣಗಳ | ಸಂಸ್ಥೆಯ ಫಾರ್ಮಕಾಲಜಿ, ಫಿಜಿಯಾಲಜಿ ಮತ್ತು ಫಾರೆನ್ಸಿಕ್ ಮೆಡಿಸಿನ್ ವಿಭಾಗಗಳಿಗೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸಲು ಅಲ್ಪಾವಧಿ ಇ-ಟೆಂಡರ್ |

| | | | | |
|---|---|---|---|---|
| | | ವಿದ್ಯಾರ್ಥಿಗಳು ಉಪಕರಣಗಳನ್ನು ಖರೀದಿಸಿ ಕೊಡಲು ಬೇಡಿಕೆ ಪತ್ರಗಳನ್ನು ಸಲ್ಲಿಸಿರುತ್ತಾರೆ. ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಲಾಯಿತು. | ಅಂದಾಜು ಮೊತ್ತ 5 ಲಕ್ಷದ ಮಿತಿಯಲ್ಲಿ ಬಂದಲ್ಲಿ ಮ್ಯಾನುಯಲ್ ಟೆಂಡರ್ ಮುಖಾಂತರ ಖರೀದಿಸಬಹುದೆಂದು ಸಭೆಯು ತೀರ್ಮಾನಿಸಲಾಯಿತು. ಅಂದಾಜು ಮೊತ್ತ ರೂ. 5.00 ಲಕ್ಷ (ವಿದ್ಯಾರ್ಥಿಗಳ ಶುಲ್ಕನಿಧಿಯಿಂದ ಪಾವತಿಸಲಾಗುವುದು) | ಮೂಲಕ ದಿ: 30/09/2013 ರಂದು ಅಧಿಸೂಚನೆ ಹೊರಡಿಸಲಾಗಿದ್ದು ಎರಡು ಸಂಸ್ಥೆಯವರು ಟೆಂಡರ್‌ನಲ್ಲಿ ಭಾಗವಹಿಸಿದ್ದು, ಆಯಾ ಉಪಕರಣಗಳಿಗೆ ಎಲ್–1 ದಾರರಾಗಿರುವ ಮೆ॥ ಕೆ.ಕೆ. ಅಲಿಯಾಂಜ್, ಬೆಂಗಳೂರು ಮತ್ತು ಮೆ॥ ಶ್ರೀ ವೆಂಕಟೇಶ್ವರ ಎಂಟರ್‌ಪ್ರೈಸೆಸ್, ಬೆಂಗಳೂರು ಇವರಿಗೆ ದಿ: 30/10/2013 ರಂದು ಸರಬರಾಜು ಆದೇಶ ನೀಡಲಾಗಿದ್ದು, ಸರಬರಾಜು ಕಾರ್ಯ ಪೂರ್ಣಗೊಂಡ ನಂತರ ಹಣ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು. |
| 24 | **ಮುಖ್ಯ ಆಡಳಿತ ಕಛೇರಿ ಎಲೆಕ್ಟ್ರಿಕಲ್ ವೈರಿಂಗ್ ಹಾಗೂ ಇಂಟರ್‌ಕಾಮ್ ವ್ಯವಸ್ಥೆ ಕಲ್ಪಿಸುವ ಬಗ್ಗೆ.** | ಸಂಸ್ಥೆಯ ಮುಖ್ಯ ಆಡಳಿತ ಕಛೇರಿಯನ್ನು ಆಧುನೀಕರಿಸಿರುವುದರಿಂದ ಕಛೇರಿಯ ಎಲ್ಲಾ ವಿಷಯ ನಿರ್ವಾಹಕರ ವಿಭಾಗಗಳಿಗೆ ಎಲೆಕ್ಟ್ರಿಕಲ್ ವೈರಿಂಗ್, ಇಂಟರ್‌ನೆಟ್ ಸಂಪರ್ಕ ಹಾಗೂ ಇಂಟರ್‌ಕಾಮ್ ವ್ಯವಸ್ಥೆ ಕಲ್ಪಿಸಲು ವಿಷಯವನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. | ಸಂಸ್ಥೆಯ ಮುಖ್ಯ ಅಡಳಿತ ಕಛೇರಿಯನ್ನು ಟೆಂಡರ್ ಪ್ರಕ್ರಿಯೆ ಮುಖಾಂತರ ಆಧುನೀಕರಿಸಿರುವುದರಿಂದ ಆ ವಿಭಾಗದಲ್ಲಿ ಪ್ರತಿಯೊಬ್ಬ ವಿಷಯ ನಿರ್ವಾಹಕರುಗಳಿಗೆ ಹೊಸದಾಗಿ ಎಲೆಕ್ಟ್ರಿಕಲ್ ವೈರಿಂಗ್, (ದರಪಟ್ಟಿಯ ಮುಖಾಂತರ ಅಂದಾಜು ಮೊತ್ತ 75.000) ಇಂಟರ್‌ನೆಟ್ ಸಂಪರ್ಕ ಮತ್ತು ಇಂಟರ್‌ಕಾಮ್ ವ್ಯವಸ್ಥೆಯನ್ನು ಡಿಜಿಎಸ್ ಆಂಡ್ ಡಿ ದರಪಟ್ಟಿಯ ಮುಖಾಂತರ (ಅಂದಾಜು ಮೊತ್ತ 97.726) ನಿಯಮಾನುಸಾರ ಪಾರದರ್ಶಕ ನಿಯಮದಡಿಯಲ್ಲಿ ಸಂಪರ್ಕ ಕಲ್ಪಿಸಲು ತೀರ್ಮಾನಿಸಲಾಯಿತು. (ಯೋಜನೆ ಲೆಕ್ಕಶೀರ್ಷಿಕೆಯಡಿಯಲ್ಲಿ) | ಸಂಸ್ಥೆಯ ಮುಖ್ಯ ಆಡಳಿತ ಕಛೇರಿಗೆ ಎಲೆಕ್ಟ್ರಿಕಲ್ ವೈರಿಂಗ್ ಮಾಡಿಸಲು ದರಪಟ್ಟಿ ಅಹ್ವಾನಿಸಲಾಗಿದೆ. ಹಾಗೂ ಇಂಟರ್‌ಕಾಮ್ ವ್ಯವಸ್ಥೆ ಕಲ್ಪಿಸಲು ಡಿ.ಜಿ.ಎಸ್.&ಡಿ ದರಪಟ್ಟಿಯಲ್ಲಿ ಲಭ್ಯವಿರುವ ಮೆ॥ ಟ್ರೈಪ್‌ವೆಲ್ ಕಂಪ್ಯೂಟರ್ಸ್, ಶಿವಮೊಗ್ಗ ಇವರಿಗೆ ದಿ: 03/06/2013 ರಂದು ಆದೇಶ ನೀಡಿಲಾಗಿದ್ದು, ಕಾರ್ಯಪೂರ್ಣಗೊಳಿಸಿರುತ್ತಾರೆ. ದಿನಾಂಕ:03/07/2013 ರಂದು ರೂ. 129307.00 ಗಳನ್ನು ಪಾವತಿಸಲಾಗಿರುತ್ತದೆ. |
| 25 | **ಕಂಪ್ಯೂಟರ್ ಹಾಗೂ ಬಯೋಮೆಟ್ರಿಕ್ ಯಂತ್ರದ ವಾರ್ಷಿಕ ನಿರ್ವಹಣೆ ಬಗ್ಗೆ.** | ಸಂಸ್ಥೆಯ ವಿವಿಧ ವಿಭಾಗಗಳಲ್ಲಿ ಲಭ್ಯವಿರುವ ಕಂಪ್ಯೂಟರ್ ಹಾಗೂ ಬಯೋಮೆಟ್ರಿಕ್ ಯಂತ್ರಗಳ ವಾರ್ಷಿಕ ನಿರ್ವಹಣೆ ನೀಡಲು ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. | 2012–13 ನೇ ಸಾಲಿಗೆ ಸಂಸ್ಥೆಯ ಮೆಗ್ಗಾನ್ ಬೋಧನಾ ಆಸ್ಪತ್ರೆಯ ಹಾಗೂ ಕಾಲೇಜು ವಿಭಾಗದಲ್ಲಿ ಬಯೋಮೆಟ್ರಿಕ್ ಯಂತ್ರಗಳ ವಾರ್ಷಿಕ ನಿರ್ವಹಣೆ ನಿರ್ವಹಿಸಲು ದರಪಟ್ಟಿ ಮುಖಾಂತರ ನಿರ್ವಹಿಸಿದ್ದು ಅವಧಿಯು ಪೂರ್ಣಗೊಂಡಿರುವುದರಿಂದ, 2013–14 ನೇ | ಸಂಸ್ಥೆ ಹಾಗೂ ಮೆಗ್ಗಾನ್ ಬೋಧನಾ ಜಿಲ್ಲಾ ಆಸ್ಪತ್ರೆಯಲ್ಲಿ ಲಭ್ಯವಿರುವ ಬಯೋಮೆಟ್ರಿಕ್ ಯಂತ್ರಗಳ ವಾರ್ಷಿಕ ನಿರ್ವಹಣೆಗಾಗಿ ಅಧಿಸೂಚನೆಯನ್ನು ದಿ: 21/04/2012 ರಂದು ಹೊರಡಿಸಲಾಗಿದ್ದು |

| | | | | |
|---|---|---|---|---|
| | | | ಸಾಲಿಗೆ ಈ ಯಂತ್ರಗಳ ವಾರ್ಷಿಕ ನಿರ್ವಹಣೆಯನ್ನು ನೀಡಲು ದರಪಟ್ಟಿ ಆಹ್ವಾನಿಸಬೇಕಾಗಿದೆ ಹಾಗೂ ಸಂಸ್ಥೆ ಹಾಗೂ ಮೆಗ್ಗಾನ್ ಬೋಧನಾ ಆಸ್ಪತ್ರೆಯ ವಿವಿಧ ವಿಭಾಗಗಳಲ್ಲಿ ಕಂಪ್ಯೂಟರ್‌ನ್ನು ಅಳವಡಿಸಿದ್ದು ವಾರಂಟಿ ಅವಧಿಯು ಪೂರ್ಣಗೊಂಡಿದ್ದು ಪದೇ ಪದೇ, ದುರಸ್ಥಿ ಮಾಡಲು ಮೂಲ ಸರಬರಾಜು ಸಂಸ್ಥೆಯವರು ಸಹಕರಿಸುತ್ತಿಲ್ಲ ಆದ್ದರಿಂದ ಈ ಎಲ್ಲಾ ಕಂಪ್ಯೂಟರ್‌ಗಳ ವಾರ್ಷಿಕ ನಿರ್ವಹಣೆಯನ್ನು ಪರಿಷ್ಕೃತ ಏಜನ್ಸಿಯವರಿಂದ ದರಪಟ್ಟಿ/ಟೆಂಡರ್ ಪ್ರಕ್ರಿಯೆ ಮುಖಾಂತರ ನಿರ್ವಹಿಸಲು ತೀರ್ಮಾನಿಸಲಾಯಿತು. ಅಂದಾಜು ಮೊತ್ತ ರೂ. 1.50 ಲಕ್ಷ (ಯೋಜನೇತರ ಲೆಕ್ಕಶೀರ್ಷಿಕೆಯಡಿಯಲ್ಲಿ) | ಮೆ॥ ರೇಣುಕಾ ಎಂಟರ್‌ಪ್ರೈಸೆಸ್, ಶಿವಮೊಗ್ಗ ಇವರು ಕಡಿಮೆ ದರ ನಮೂದಿಸಿದ್ದು, ದಿ: 30/04/2012ರಂದು ಸದರಿ ಸಂಸ್ಥೆಯವರಿಗೆ ಕಾರ್ಯಾದೇಶ ನೀಡಲಾಗಿರುತ್ತದೆ. ಸದರಿ ಸಂಸ್ಥೆಯವರಿಗೆ ದಿ: 29/05/2013 ರಂದು ಕರಾರು ಪತ್ರದ ನಿಯಮದಂತೆ 50% (ರೂ. 48804/-) ಮುಂಗಡವಾಗಿ ಪಾವತಿಸಲಾಗಿರುತ್ತದೆ. ಉಳಿದಂತೆ ವಾರ್ಷಿಕ ನಿರ್ವಹಣೆ ಅವಧಿಪೂರ್ಣಗೊಂಡ ನಂತರ ಬಾಕಿ ಹಣ ಪಾವತಿಸಲಾಗುವುದು. ಕಂಪ್ಯೂಟರ್‌ಗಳ ವಾರ್ಷಿಕ ನಿರ್ವಹಣೆಗೆ ಮೂಲ ಸರಬರಾಜು ಸಂಸ್ಥೆಯವರಿಂದ ಸಂಸ್ಥೆಯಲ್ಲಿ ಲಭ್ಯವಿರುವ ಕಂಪ್ಯೂಟರ್‌ಗಳ ಎಸ್ಟಿಮೇಟ್ ನೀಡಲು ಸೂಚಿಸಿದ್ದು, ಅಂದಾಜು ಪಟ್ಟಿ ಬಂದ ನಂತರ ಕ್ರಮವಹಿಸಲಾಗುವುದು. |
| 26 | **ವಿದ್ಯಾರ್ಥಿನಿಲಯಗಳ ಅಡುಗೆ ಮನೆ ಸಾಮಾಗ್ರಿಗಳನ್ನು ಖರೀದಿಸುವ ಬಗ್ಗೆ.** | ವಿದ್ಯಾರ್ಥಿನಿಲಯಗಳಿಗೆ ಅವಶ್ಯವಿರುವ ಅಡುಗೆ ಮನೆ ಸಾಮಾಗ್ರಿಗಳನ್ನು ನಿಯಮಾನುಸಾರ ದರಪಟ್ಟಿ ಮುಖಾಂತರ ಖರೀದಿಸಲಾಗಿದ್ದು, ಘಟನೋತ್ತರ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. | ವಿದ್ಯಾರ್ಥಿನಿಲಯಗಳಿಗೆ ತುರ್ತಾಗಿ ಬೇಕಾಗಿರುವ ಅಡುಗೆಮನೆ ಅವಶ್ಯಕ ಸಾಮಾಗ್ರಿಗಳನ್ನು ನಿಯಮಾನುಸಾರ ದರಪಟ್ಟಿ ಮುಖಾಂತರ ಎಲ್-1 ಸಂಸ್ಥೆಯವರಾದ ಮೆ॥ ಮಲ್ಲೇಶ್ವರ ಪ್ರಿಂಟರ್ಸ್, ಭದ್ರಾವತಿ ಇವರಿಂದ ಖರೀದಿಸಲಾಗಿದ್ದು, ಇದರ ಮೊತ್ತ ರೂ. 43920/-ಗಳನ್ನು ಸದರಿ ಸಂಸ್ಥೆಯವರಿಗೆ ನೀಡಿರುವುದನ್ನು ಸಭೆಯು ಅನುಮೋದಿಸಿತು. (ವಿದ್ಯಾರ್ಥಿಗಳ ಬಾಡಿಗೆ ಶುಲ್ಕ ನಿಧಿಯಿಂದ) | ಮೆ॥ ಮಲ್ಲೇಶ್ವರ ಪ್ರಿಂಟರ್ಸ್, ಭದ್ರಾವತಿ ಇವರಿಂದ ಖರೀದಿಸಲಾಗಿದ್ದು, ಇದರ ಮೊತ್ತ ರೂ. 43920/-ಗಳನ್ನು ಪಾವತಿಸಲಾಗಿದೆ. |
| 27 | **ಬಾಲಕರ ವಿದ್ಯಾರ್ಥಿನಿಲಯಕ್ಕೆ ವಾಟರ್ (ಸಿಂಟೆಕ್ಸ್) ಟ್ಯಾಂಕ್ ಖರೀದಿಸಿರುವ ಬಗ್ಗೆ.** | ಬಾಲಕರ ವಿದ್ಯಾರ್ಥಿನಿಲಯದಲ್ಲಿದ್ದ ವಾಟರ್ ಟ್ಯಾಂಕ್ ಹಾಳಾಗಿದ್ದರಿಂದ ಹೊಸದಾಗಿ ದರಪಟ್ಟಿ ಮುಖಾಂತರ ಖರೀದಿಸಲಾಗಿದ್ದು, ಘಟನೋತ್ತರ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. | ಬಾಲಕರ ವಿದ್ಯಾರ್ಥಿನಿಲಯದಲ್ಲಿ ಅಳವಡಿಸಿದ್ದ ವಾಟರ್ ಟ್ಯಾಂಕ್‌ನ್ನು ನಿಯಮಾನುಸಾರ ದರಪಟ್ಟಿ ಮುಖಾಂತರ ಎಲ್-1 ಸಂಸ್ಥೆಯವರಾದ ಮೆ॥ ಶರಾವತಿ ಸೆರಾಮಿಕ್ ಹೌಸ್, ಶಿವಮೊಗ್ಗ ಇವರಿಂದ | ಮೆ॥ ಶರಾವತಿ ಸೆರಾಮಿಕ್ ಹೌಸ್, ಶಿವಮೊಗ್ಗ ಇವರಿಂದ ಖರೀದಿಸಲಾಗಿದ್ದು, ಇದರ ಮೊತ್ತ ರೂ. 13300/-ಗಳನ್ನು ಪಾವತಿಸಲಾಗಿದೆ. |

| | | | | |
|---|---|---|---|---|
| | | | ಖರೀದಿಸಲಾಗಿದ್ದು, ಇದರ ಮೊತ್ತ ರೂ. 13300/-ಗಳನ್ನು ಸದರಿ ಸಂಸ್ಥೆಯವರಿಗೆ ನೀಡಿರುವುದನ್ನು ಸಭೆಯು ಅನುಮೋದಿಸಿತು. (ವಿದ್ಯಾರ್ಥಿಗಳ ಬಾಡಿಗೆ ಶುಲ್ಕ ನಿಧಿಯಿಂದ) | |
| 28 | **ವಿದ್ಯಾರ್ಥಿನಿಲಯಗಳಿಗೆ ಅವಶ್ಯವಿರುವ ಕಂಪ್ಯೂಟರ್ ಹಾಗೂ ಪ್ರಿಂಟರ್‌ಗಳನ್ನು ಖರೀದಿಸಿರುವ ಬಗ್ಗೆ.** | ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ ಕಛೇರಿಗೆ ಡಿ.ಜಿ.ಎಸ್.&ಡಿ. ಮುಖಾಂತರ 2 ಕಂಪ್ಯೂಟರ್ ಹಾಗೂ 2 ಪ್ರಿಂಟರ್‌ಗಳನ್ನು ಖರೀದಿಸಿದ್ದು, ಘಟನೋತ್ತರ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. | ಭದ್ರಾ ಬಾಲಕರ ಮತ್ತು ತುಂಗಾ ಬಾಲಕಿಯರ ವಿದ್ಯಾರ್ಥಿನಿಲಯಗಳ ಕಛೇರಿಗಳಿಗೆ ಅವಶ್ಯಕವಾಗಿ 2 ಕಂಪ್ಯೂಟರ್ ಮತ್ತು 2 ಪ್ರಿಂಟರ್‌ಗಳು ಬೇಕಾಗಿದ್ದರಿಂದ ನಿಯಮಾನುಸಾರ ಡಿ.ಜಿ.ಎಸ್.&ಡಿ. ಮುಖಾಂತರ ಮೆ॥ ಸಿ.ಎಸ್. ಇನ್‌ಫೋಟೆಕ್, ಶಿವಮೊಗ್ಗ ಇವರಿಂದ ಖರೀದಿಸಿದ್ದು, ಇದರ ಮೊತ್ತ ರೂ. 79009/-ಗಳನ್ನು ಸದರಿ ಸಂಸ್ಥೆಯವರಿಗೆ ನೀಡಿರುವುದನ್ನು ಸಭೆಯು ಅನುಮೋದಿಸಿತು. (ವಿದ್ಯಾರ್ಥಿಗಳ ಬಾಡಿಗೆ ಶುಲ್ಕ ನಿಧಿಯಿಂದ) | ಮೆ॥ ಸಿ.ಎಸ್. ಇನ್‌ಫೋಟೆಕ್, ಶಿವಮೊಗ್ಗ ಇವರಿಂದ ಖರೀದಿಸಿದ್ದು, ಇದರ ಮೊತ್ತ ರೂ. 79009/-ಗಳನ್ನು ಪಾವತಿಸಲಾಗಿದೆ. |
| 29 | **ಪೆಥಾಲಜಿ ವಿಭಾಗಕ್ಕೆ ಅವಶ್ಯವಿರುವ ರೀ-ಏಜೆಂಟ್ಸ್‌ಗಳನ್ನು ಖರೀದಿಸುವ ಬಗ್ಗೆ.** | ಪೆಥಾಲಜಿ ವಿಭಾಗದ ಮುಖ್ಯಸ್ಥರು ಆ ವಿಭಾಗಕ್ಕೆ ಅವಶ್ಯವಿರುವ ರೀ-ಏಜೆಂಟ್ಸ್‌ಗಳನ್ನು ಖರೀದಿಸಿಕೊಡಲು ಬೇಡಿಕೆ ಪತ್ರ ಸಲ್ಲಿಸಿರುವುದರಿಂದ ನಿಯಮಾನುಸಾರ ದರಪಟ್ಟಿ ಮುಖಾಂತರ ಖರೀದಿಸಿದ್ದು, ಘಟನೋತ್ತರ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. | 2012-2013ನೇ ಸಾಲಿನ ಟೆಂಡರ್ ಪ್ರಕ್ರಿಯೆಯಲ್ಲಿ ಪಿಟಿ ಮತ್ತು ಇಪಿಟಿಟಿ ರೀ-ಏಜೇಂಟ್ಸ್‌ಗಳನ್ನು ನಮೂದಿಸದಿರುವ ಕಾರಣ ರೀ-ಏಜೇಂಟ್ಸ್‌ಗಳನ್ನು ನಿಯಮಾನುಸಾರ ದರಪಟ್ಟಿಯ ಮುಖಾಂತರ ಎಲ್-1 ಸಂಸ್ಥೆಯವರಾದ ಎಸ್. ವಿ ಡಯೋಗ್ನಸ್ಟಿಕ್ ಶಿವಮೊಗ್ಗರವರಿಂದ ಖರೀದಿಸಿದ್ದು ರೂ.52615.00ರೂಗಳನ್ನು ಸದರಿ ಸಂಸ್ಥೆಯವರಿಗೆ ಪಾವತಿಸಿರುವುದನ್ನು ಸಭೆಯು ಅನುಮೋದಿಸಿತು. (ಯೋಜನೇತರ ಲೆಕ್ಕಶೀರ್ಷಿಕೆಯಡಿಯಲ್ಲಿ) | ಎಸ್. ವಿ ಡಯೋಗ್ನಸ್ಟಿಕ್ ಶಿವಮೊಗ್ಗರವರಿಂದ ಖರೀದಿಸಿದ್ದು ರೂ.52615.00 ಗಳನ್ನು ಪಾವತಿಸಲಾಗಿದೆ. |

| | | | | |
|---|---|---|---|---|
| 30 | **ಗ್ರಂಥಾಲಯ ವಿಭಾಗಕ್ಕೆ ಹಾಗೂ ಆಡಳಿತ ಕಛೇರಿಗೆ ಅವಶ್ಯ ನಮೂನೆಗಳನ್ನು ಮುದ್ರಿಸುವ ಬಗ್ಗೆ.** | ಸಂಸ್ಥೆಯ ಗ್ರಂಥಾಲಯ ವಿಭಾಗಕ್ಕೆ ಹಾಗೂ ಮುಖ್ಯಆಡಳಿತ ಕಛೇರಿಗೆ ಅವಶ್ಯವಿರುವ ನಮೂನೆಗಳನ್ನು ಮುದ್ರಿಸಿ ಸರಬರಾಜು ಮಾಡಲು ಬೇಡಿಕೆಪತ್ರವನ್ನು ಸಲ್ಲಿಸಿದ್ದು ಘಟನೋತ್ತರ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. | 2012-2013ನೇ ಸಾಲಿನ ಟೆಂಡರ್ ಪ್ರಕ್ರಿಯೆಯಲ್ಲಿ ಕೆಲವು ನಮೂನೆಗಳನ್ನು ನಮೂದಿಸದೆ ಇರುವುದರಿಂದ ಈ ನಮೂನೆಗಳು ದೈನಂದಿನ ಕೆಲಸ ಕಾರ್ಯಗಳಿಗೆ ತುರ್ತು ಅವಶ್ಯವಿರುವುದರಿಂದ ನಿಯಮಾನುಸಾರ ದರಪಟ್ಟಿಯ ಮುಖಾಂತರ ಎಲ್-1 ಸಂಸ್ಥೆಯವರಾದ ಮೆ॥ ವರದ ಪ್ರಿಂಟರ್ಸ್ ಶಿವಮೊಗ್ಗ ಇವರಿಗೆ ರೂ.31150.00 ರೂಗಳನ್ನು ಪಾವತಿಸಲು ಸಭೆಯು ಅನುಮೋದಿಸಿತು. (ಯೋಜನೆ ಲೆಕ್ಕಶೀರ್ಷಿಕೆಯಡಿಯಲ್ಲಿ) | ಗ್ರಂಥಾಲಯ ವಿಭಾಗಕ್ಕೆ ಅವಶ್ಯವಿರುವ ನಮೂನೆಗಳನ್ನು ಸರಬರಾಜು ಮಾಡಲು ದಿನಾಂಕ: 21/03/2013 ರಂದು ಅಧಿಸೂಚನೆ ಹೊರಡಿಸಲಾಗಿದ್ದು, ಮೆ॥ ವರದಾ ಪ್ರಿಂಟರ್ಸ್, ಶಿವಮೊಗ್ಗ ಇವರು ಎಲ್-1 ಆಗಿದ್ದು ದಿ: 19/04/2013 ರಂದು ಆದೇಶ ನೀಡಲಾಗಿ, ನಮೂನೆಗಳನ್ನು ಮುದ್ರಿಸಿ, ಸರಬರಾಜು ಮಾಡಿರುತ್ತಾರೆ. ಸದರಿಯವರಿಗೆ ದಿ: 10/06/2013 ರಂದು ರೂ. 31150/- ಗಳನ್ನು ಪಾವತಿಸಲಾಗಿದೆ. |
| 31 | **2012-13ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ/ಎಸ್.ಟಿ.ಎಸ್.ಪಿ. ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನದಲ್ಲಿ ಅನುಮೋದಿತ ಸಾಮಾಗ್ರಿಗಳನ್ನು ಖರೀದಿಸುವ ಬಗ್ಗೆ ಹಾಗೂ 2013-14 ನೇ ಸಾಲಿನ ಎಸ್.ಸಿ.ಎಸ್.ಪಿ/ಎಸ್.ಟಿ.ಎಸ್.ಪಿ. ಯೋಜನೆಯ ಕ್ರಿಯಾಪಟ್ಟಿ ಅನುಮೋದನೆ ಕುರಿತು.** | 2012-13ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ/ಎಸ್.ಟಿ.ಎಸ್.ಪಿ ಯೋಜನೆಯಡಿಯಲ್ಲಿ ಲೆಕ್ಕಶೀರ್ಷಿಕೆ 2210-05-105-1-40-422/423 ಯಡಿಯಲ್ಲಿ ಕ್ರಮವಾಗಿ 84 ಲಕ್ಷ, 62.50 ಲಕ್ಷ ಮಾರ್ಚ್-2013ರ ಮಾಹೆಯಲ್ಲಿ ಬಿಡುಗಡೆಯಾಗಿದ್ದು ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್, ಸ್ಟೆಥಾಸ್ಕೋಪ್, ಬಿ.ಪಿ. ಅಪರೇಟಸ್, ಸ್ಟಡಿ ಲ್ಯಾಂಪ್, ಚಾರ್ಜಬಲ್ ಲೈಟ್, ಏಪ್ರಾನ್, ಪೆನ್‌ಡ್ರೈವ್, ಹಾಸ್ಟೆಲ್ ಕೊಠಡಿ ಬಾಡಿಗೆ ಹಾಗೂ ಪುಸ್ತಕಗಳ ಖರೀದಿ, ಸಂಸ್ಥೆಯ 3 ನೇ ಹಂತದ ಕಟ್ಟಡ ಕಾಮಗಾರಿಯಲ್ಲಿ ವಿದ್ಯಾರ್ಥಿನಿಲಯಗಳ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದ್ದು, ಸದರಿ ಬಿಲ್ಲಿನ 23% (18%+5%) ಮೊತ್ತವನ್ನು ಸದರಿ ಅನುದಾನದಡಿಯಲ್ಲಿ ಪಾವತಿಸುವ ಪ್ರಕ್ರಿಯೆ ಚಾಲನೆಯಲ್ಲಿದ್ದು, 2013-14ನೇ ಸಾಲಿನ ಎಸ್.ಸಿ.ಎಸ್.ಪಿ/ಎಸ್.ಟಿ.ಎಸ್.ಪಿ ಯೋಜನೆ ಕ್ರಿಯಾಪಟ್ಟಿಯನ್ನು ಅನುಮೋದನೆಗಾಗಿ ವಿಷಯವನ್ನು ಮಂಡಿಸಲಾಗಿದೆ. | 2012-13ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ/ಎಸ್.ಟಿ.ಎಸ್.ಪಿ ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನದಲ್ಲಿ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಸಾಮಾಗ್ರಿಗಳನ್ನು ಖರೀದಿಸಲು ಮತ್ತು 2013-14 ನೇ ಸಾಲಿನ ಕ್ರಿಯಾಯೋಜನೆಯನ್ನು ಸಭೆಯು ಅನುಮೋದಿಸಿತು. | 2012-13 ನೇ ಸಾಲಿನ ಎಸ್.ಸಿ.ಎಸ್.ಪಿ/ಎಸ್.ಟಿ.ಎಸ್.ಪಿ ಅನುದಾನದಲ್ಲಿ ಈ ಕೆಳಗಿನ ವಿವರಗಳಂತೆ ವಿದ್ಯಾರ್ಥಿಗಳಿಗೆ ಹಾಗೂ ರೋಗಿಗಳಿಗೆ ಸೌಲಭ್ಯವನ್ನು ಒದಗಿಸಲಾಗಿದೆ.<br>1. ಮೆ॥ ಟೈಪ್‌ವೆಲ್ ಕಂಪ್ಯೂಟರ್ಸ್ ಶಿವಮೊಗ್ಗ ಇವರಿಗೆ ಡಿ.ಜಿ.ಎಸ್&ಡಿ ದರಪಟ್ಟಿಯಲ್ಲಿ 19 ಲ್ಯಾಪ್‌ಟಾಪ್‌ಗಳನ್ನು ಸರಬರಾಜು ಮಾಡಲು ದಿ: 14/03/2013 ರಂದು ಆದೇಶ ನೀಡಲಾಗಿದ್ದು, ಸರಬರಾಜು ಕಾರ್ಯಪೂರ್ಣಗೊಳಿಸಿರುತ್ತಾರೆ. ಸದರಿಯವರಿಗೆ ದಿ: 18/06/2013 ರಂದು ರೂ. 881980/- ಗಳನ್ನು ಪಾವತಿಸಲಾಗಿರುತ್ತದೆ.<br>2. 19 ಸ್ಟೆಥಾಸ್ಕೋಪ್‌ಗಳನ್ನು ಖರೀದಿ ಮಾಡಲು ದಿ: 14/03/2013 ರಂದು ಅಧಿಸೂಚನೆ ಹೋರಡಿಸಲಾಗಿದ್ದು, ಎಲ್-1 ಸಂಸ್ಥೆಯವರಾದ ಮೆ॥ ಸುದರ್ಶನ್ ಟ್ರೇಡರ್ಸ್, ಶಿವಮೊಗ್ಗ ಇವರಿಗೆ ದಿ: 21/03/2013 ರಂದು ಸರಬರಾಜು ಆದೇಶ ನೀಡಲಾಗಿರುತ್ತದೆ. ಸರಬರಾಜು ಆದೇಶ ಪೂರ್ಣಗೊಂಡಿದ್ದು, ದಿ: 05/07/2013 ರಂದು ರೂ. 99275/- ಗಳನ್ನು ಪಾವತಿಸಲಾಗಿದೆ.<br>3. 19 ಎಮರ್ಜನ್ಸಿ ಲೈಟ್, 19 ಸ್ಟಡಿ ಲ್ಯಾಂಪ್, |

| | | | | |
|---|---|---|---|---|
| | | | | 19 ಬಿ.ಪಿ ಅಪರೇಟಸ್‌ಗಳನ್ನು ಖರೀದಿ ಮಾಡಲು ದಿ: 14/03/2013 ರಂದು ಅಧಿಸೂಚನೆ ಹೊರಡಿಸಲಾಗಿದ್ದು, ಎಲ್–1 ಸಂಸ್ಥೆಯವರಾದ ಮೆ॥ ಸುದರ್ಶನ್ ಟ್ರೇಡರ್ಸ್, ಶಿವಮೊಗ್ಗ ಇವರಿಗೆ ದಿ: 22/03/2013 ರಂದು ಸರಬರಾಜು ಆದೇಶ ನೀಡಲಾಗಿದ್ದು, ಸರಬರಾಜು ಕಾರ್ಯಪೂರ್ಣಗೊಂಡಿರುತ್ತದೆ. ಸದರಿಯವರಿಗೆ ದಿ: 05/07/2013 ರಂದು ರೂ. 99750/– ಗಳನ್ನು ಪಾವತಿಸಲಾಗಿರುತ್ತದೆ.<br>4. 19 ಪೆನ್‌ಡ್ರೈವ್‌ಗಳನ್ನು ಸರಬರಾಜು ಮಾಡಲು ದಿ: 14/03/2013 ರಂದು ಅಧಿಸೂಚನೆ ಹೊರಡಿಸಲಾಗಿದ್ದು, ಎಲ್–1 ಸಂಸ್ಥೆಯವರಾದ ಮೆ॥ ಟೈಪ್‌ವೆಲ್ ಕಂಪ್ಯೂಟರ್ಸ್, ಶಿವಮೊಗ್ಗ ಇವರಿಗೆ ದಿ: 22/03/2013 ರಂದು ಸರಬರಾಜು ಆದೇಶ ನೀಡಲಾಗಿದ್ದು, ಸರಬರಾಜು ಕಾರ್ಯಪೂರ್ಣಗೊಂಡಿರುತ್ತದೆ. ಸದರಿಯವರಿಗೆ ದಿ: 06/08/2013 ರಂದು ರೂ. 8493/– ಗಳನ್ನು ಪಾವತಿಸಲಾಗಿರುತ್ತದೆ.<br>5. 19 ಏಪ್ರಾನ್‌ಗಳನ್ನು ಖರೀದಿಸಲು ದಿ: 14/03/2013 ರಂದು ಅಧಿಸೂಚನೆ ಹೊರಡಿಸಲಾಗಿದ್ದು, ಎಲ್–1 ಸಂಸ್ಥೆಯವರಾದ ಮೆ॥ ಸುದರ್ಶನ್ ಟ್ರೇಡರ್ಸ್, ಶಿವಮೊಗ್ಗ ಇವರಿಗೆ ದಿ: 23/03/2013 ರಂದು ಸರಬರಾಜು ಆದೇಶ ನೀಡಲಾಗಿರುತ್ತದೆ. ಸದರಿಯವರಿಗೆ 19/07/2013 ರಂದು ರೂ. 6517/– ಗಳನ್ನು ಪಾವತಿಸಲಾಗಿರತ್ತದೆ.<br>6. ಆಸ್ಪತ್ರೆಯ ಪ.ಜಾ/ಪ.ಪಂ. ರೋಗಿಗಳಿಗೆ ದಿ: 01/04/2012 ರಿಂದ 31/03/2013 ರವರೆಗೆ ಒಟ್ಟು ರೂ. 3506174/– ಗಳನ್ನು ಔಷಧಗಳಿಗೊಸ್ಕರ ಉಪಯೋಗಿಸಲಾಗಿರುತ್ತದೆ. ಈ ಔಷಧಗಳನ್ನು ಇ–ಪ್ರಕ್ಯೂರ್‌ಮೆಂಟ್ |

| | | | | |
|---|---|---|---|---|
| | | | | ಮುಖಾಂತರ ಖರೀದಿಸಲಾಗಿರುತ್ತದೆ.<br>7. ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ 75 ಪ.ಜಾ/ಪ.ಪಂ. ದ ವಿದ್ಯಾರ್ಥಿಗಳಿಗೆ ರೂಂ ಬಾಡಿಗೆ ಮತ್ತು ಊಟದ ವೆಚ್ಚವನ್ನು ಭರಿಸಲಾಗಿರುತ್ತದೆ. ಒಟ್ಟು ರೂ. 1496546/–.<br>8. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಎಂ.ಬಿ.ಬಿ.ಎಸ್ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಖರೀದಿಸಿ ವಿತರಿಸಲಾಗಿದೆ. ಹಾಗೂ ಸಂಸ್ಥೆಯ ಕೇಂದ್ರೀಯ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಖರೀದಿಸಿ, ಪ್ರತ್ಯೇಕ ರ್‍ಯಾಕ್‌ಗಳನ್ನು ಅಳವಡಿಸಿ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲ ಮಾಡಿಕೊಡಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.<br>ಇ–ಟೆಂಡರ್ ಅಧಿಸೂಚನೆ ದಿ: 06/06/2013 ರಂದು ಹೊರಡಿಸಲಾಗಿರುತ್ತದೆ. ಈ ಟೆಂಡರ್ ಪ್ರಕ್ರಿಯೆಯಲ್ಲಿ 04 ಸಂಸ್ಥೆಯರಾದ ಮೆ॥ ಸಿಕೆ ಬುಕ್ ಸೇಲರ್, ಬೆಂಗಳೂರು, ಮೆ॥ ಸಿನರ್ಜಿ ಬುಕ್ ಸೇಲರ್, ಬೆಂಗಳೂರು, ಮೆ॥ ಸ್ಟ್ಯಾಂಡರ್ಡ್ ಬುಕ್ ಹೌಸ್, ಬೆಂಗಳೂರು, ಮೆ॥ ಎಸ್.ವಿ.ಎಸ್ ಮೆಡಿಕಲ್ ಬುಕ್ ಹೌಸ್, ಶಿವಮೊಗ್ಗ ಎಲ್–1 ಆಗಿದ್ದು, ದಿ: 30/08/2013 ರಂದು ಸರಬರಾಜು ಆದೇಶ ನೀಡಲಾಗಿರುತ್ತದೆ. ಸದರಿಯವರು ಸರಬರಾಜು ಕಾರ್ಯ ಪೂರ್ಣಗೊಳಿಸಿದ್ದು, ಪುಸ್ತಕಗಳ ಮೊತ್ತವನ್ನು ಪಾವತಿ ಮಾಡಲು ಕ್ರಮಕೈಗೊಳ್ಳಲಾಗುವುದು. |

| | | | | |
|---|---|---|---|---|
| 32 | ***ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:-*** | | | |
| 1 | **ಮುಖ್ಯ ಆಡಳಿತಾಧಿಕಾರಿಗಳಿಗೆ ಹೊಸದಾಗಿ ಎಕ್ಸಿಕ್ಯೂಟಿವ್ ಚೇರ್‌ನ್ನು ಖರೀದಿ ಮಾಡುವ ಬಗ್ಗೆ.** | ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು ಕೂರುತ್ತಿರುವ ಆಸನವು ಹಾಳಾಗಿದ್ದು ಈ ಆಸನದ ಎಕ್ಸಿಕ್ಯೂಟಿವ್ ಚೇರ್‌ನ್ನು ದರಪಟ್ಟಿಯ ಮುಖಾಂತರ ಖರೀದಿಸಲು ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು. | ನಿಯಮಾನುಸಾರ ಖರೀದಿಸಲು ಸಭೆಯು ತೀರ್ಮಾನಿಸಿತು. ಅಂದಾಜು ಮೊತ್ತ ರೂ. 15000/- (ಯೋಜನೆ ಲೆಕ್ಕಶೀರ್ಷಿಕೆಯಡಿಯಲ್ಲಿ) | ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳ ಕಛೇರಿಗೆ ಎಕ್ಸಿಕ್ಯೂಟಿವ್ ಚೇರ್‌ನ್ನು ಖರೀದಿಸಲು ದಿನಾಂಕ: 05/06/2013 ರಂದು ಅಧಿಸೂಚನೆ ಹೊರಡಿಸಲಾಗಿದ್ದು, ಮೆ॥ ಸುದರ್ಶನ್ ಟ್ರೇಡರ್ಸ್, ಶಿವಮೊಗ್ಗ ಇವರು ಎಲ್-1ಆಗಿದ್ದು, ದಿ: 11/06/2013ರಂದು ಆದೇಶ ನೀಡಿದ್ದು, ಎಕ್ಸಿಕ್ಯೂಟೀವ್ ಚೇರ್‌ನ್ನು ಸರಬರಾಜು ಮಾಡಿರುತ್ತಾರೆ. ಸದರಿಯವರಿಗೆ ದಿನಾಂಕ: 20/07/2013 ರಂದು ರೂ. 7950/- ಗಳನ್ನು ಪಾವತಿಸಲಾಗಿರುತ್ತದೆ. (ಯೋಜನೆ ಲೆಕ್ಕ ಶೀರ್ಷಿಕೆಯಡಿ) |
| 2 | **ಆಡಳಿತ ಕಛೇರಿಯ ಜೆರಾಕ್ಸ್ ಯಂತ್ರಗಳ ಟೋನರ್ ಕಾಟ್ರಿಡ್ಜ್ ಗಳ ಖರೀದಿಯ ಬಗ್ಗೆ.** | ಮುಖ್ಯ ಆಡಳಿತ ಕಛೇರಿ, ಪರೀಕ್ಷಾ ವಿಭಾಗ, ಹಾಗೂ ಫಾರೆನ್ಸಿಕ್ ವಿಭಾಗಗಳಿಗೆ ದೈನಂದಿನ ಕೆಲಸಕಾರ್ಯಗಳಿಗೆ ಅತ್ಯವಶ್ಯವಾಗಿ ಟೋನರ್ ಕಾಟ್ರಿಡ್ಜ್‌ಗಳನ್ನು ಖರೀದಿಸಲು ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಲಾಯಿತು. | ನಿಯಮಾನುಸಾರ ಖರೀದಿಸಲು ಸಭೆಯು ತೀರ್ಮಾನಿಸಿತು. ಮೊತ್ತ ರೂ. 88518/- (ಯೋಜನೆ ಲೆಕ್ಕಶೀರ್ಷಿಕೆಯಡಿಯಲ್ಲಿ) | ಮುಖ್ಯ ಆಡಳಿತ ಕಛೇರಿ, ಪರೀಕ್ಷಾ ವಿಭಾಗ ಹಾಗೂ ಫಾರೆನ್ಸಿಕ್ ವಿಭಾಗಗಳಿಗೆ ಅತ್ಯವಶ್ಯವಾಗಿ ಟೋನರ್ ಕಾಟ್ರಿಡ್ಜ್‌ಗಳನ್ನು ಖರೀದಿಸಲು ಅಧಿಸೂಚನೆ ಹೊರಡಿಸಿ, ಎಲ್-1 ಸಂಸ್ಥೆಯವರಾದ ಮೆ॥ ಅಭಿಷೇಕ್ ಎಂಟರ್‌ಪ್ರೈಸೆಸ್, ಶಿವಮೊಗ್ಗ ಇವರಿಗೆ ದಿ: 09/05/2013ರಂದು ಖರೀದಿಸಲು ಆದೇಶ ನೀಡಲಾಗಿರುತ್ತದೆ. ಮೊತ್ತ ರೂ. 88518/- ಗಳನ್ನು ದಿ: 11/06/2013 ರಂದು ಪಾವತಿಸಲಾಗಿದೆ. |

| | | | | |
|---|---|---|---|---|
| 3 | **ಮೆಗ್ಗಾನ್ ಬೋಧನಾ ಆಸ್ಪತ್ರೆಯ ಬಯೋಮೆಟ್ರಿಕ್ ವಿಭಾಗಕ್ಕೆ ಪ್ರಿಂಟರ್ ಖರೀದಿಸುವ ಬಗ್ಗೆ.** | ಮೆಗ್ಗಾನ್ ಬೋಧನಾ ಆಸ್ಪತ್ರೆಯ ಬಯೋಮೆಟ್ರಿಕ್ ವಿಭಾಗದಲ್ಲಿ ಬ್ಯಾಕ್ ಟು ಬ್ಯಾಕ್ ನ ಪ್ರಿಂಟರ್‌ನ ಅವಶ್ಯಕತೆ ಇದೆಯೆಂದು ವೈದ್ಯಕೀಯ ಅಧೀಕ್ಷಕರು ಬೇಡಿಕೆ ಪತ್ರವನ್ನು ಸಲ್ಲಿಸಿರುವುದರಿಂದ ಈ ಯಂತ್ರವನ್ನು ಖರೀದಿಸಲು ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು. | ಬಯೋಮೆಟ್ರಿಕ್ ವಿಭಾಗದಲ್ಲಿ ಹಾಜರಾತಿ ನೀಡಲು ಪ್ರತಿ ತಿಂಗಳು ಬ್ಯಾಕ್ ಟು ಬ್ಯಾಕ್ ಪ್ರಿಂಟ್ ತೆಗೆಯಬಲ್ಲ ಪ್ರಿಂಟರ್‌ನ್ನು ದರಪಟ್ಟಿಯ ಮುಖಾಂತರ ಖರೀದಿಸಲು ಸೂಚಿಸಿದರು ಸಭೆಯು ಅನುಮೋದಿಸಿತು. ಅಂದಾಜು ಮೊತ್ತ ರೂ. 15000/- (ಯೋಜನೇತರ ಲೆಕ್ಕಶೀರ್ಷಿಕೆಯಡಿಯಲ್ಲಿ) | ಮೆಗ್ಗಾನ್ ಬೋಧನಾ ಆಸ್ಪತ್ರೆಯ ಬಯೋಮೆಟ್ರಿಕ್ ವಿಭಾಗದಲ್ಲಿ ಬ್ಯಾಕ್ ಟು ಬ್ಯಾಕ್ ನ ಪ್ರಿಂಟರ್‌ನ ಖರೀದಿಸಲು ದಿನಾಂಕ: 05/06/2013 ರಂದು ಅಧಿಸೂಚನೆ ಹೊರಡಿಸಲಾಗಿದ್ದು, ಮೆ॥ ಟೈಪ್‌ವೆಲ್ ಕಂಪ್ಯೂಟರ್ಸ್, ಶಿವಮೊಗ್ಗ ಇವರು ಎಲ್1 ಆಗಿದ್ದು, ದಿ: 12/06/2013ರಂದು ಆದೇಶ ನೀಡಲಾಗಿ, ಪ್ರಿಂಟರ್‌ನ್ನು ಸರಬರಾಜು ಮಾಡಿರುತ್ತಾರೆ. ಸದರಿಯವರಿಗೆ ದಿನಾಂಕ: 21/08/2013 ರಂದು ರೂ. 16500/- ಗಳ ಬಿಲ್ ಮೊತ್ತವನ್ನು ಪಾವತಿಸಲಾಗಿರುತ್ತದೆ. (ಯೋಜನೇತರ ಲೆಕ್ಕಶೀರ್ಷಿಕೆಯಡಿ) |
| 4 | **ಸಂಸ್ಥೆಯ ವಿವಿಧ ವಿಭಾಗಗಳ ಕಂಪ್ಯೂಟರ್‌ಗಳಿಗೆ ಆ್ಯಂಟಿವೈರಸ್ ಅಳವಡಿಸುವ ಬಗ್ಗೆ.** | ಸಂಸ್ಥೆ ಹಾಗೂ ಮೆಗ್ಗಾನ್ ಬೋಧನಾ ಆಸ್ಪತ್ರೆಯ ವಿವಿಧ ವಿಭಾಗಗಳ ಕಂಪ್ಯೂಟರ್‌ಗಳಿಗೆ ಆ್ಯಂಟಿವೈರಸ್‌ನ್ನು ಅಳವಡಿಸಲು ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. | ಸಂಸ್ಥೆಯ ಆಡಳಿತ ಕಛೇರಿ ಹಾಗೂ ವಿವಿಧ ವಿಭಾಗಗಳಲ್ಲಿ ಇಂಟರ್‌ನೆಟ್ ಸಂಪರ್ಕವಿರುವುದರಿಂದ ಕಂಪ್ಯೂಟರ್‌ಗೆ ವೈರಸ್‌ನ ತೊಂದರೆ ಉಂಟಾಗುತ್ತಿರುವುದರಿಂದ ಕಛೇರಿಯ ದೈನಂದಿನ ಕೆಲಸ ಕಾರ್ಯಗಳಿಗೆ ಅಡಚಣೆ ಉಂಟಾಗುತ್ತಿರುತ್ತದೆ. ಆದ್ದರಿಂದ ಮೂಲ ಸರಬರಾಜು ಸಂಸ್ಥೆಯವರಿಂದ ಈ ಕಂಪ್ಯೂಟರ್‌ಗಳಿಗೆ ಆ್ಯಂಟಿವೈರಸ್ ಅಳವಡಿಸಲು ಸಭೆಯು ಅನುಮೋದಿಸಿತು. ಅಂದಾಜು ಮೊತ್ತ ರೂ. 45000/- (ಯೋಜನೇತರ ಲೆಕ್ಕಶೀರ್ಷಿಕೆಯಡಿಯಲ್ಲಿ) | ಸಂಸ್ಥೆಯ ಆಡಳಿತ ಕಛೇರಿ ಹಾಗೂ ವಿವಿಧ ವಿಭಾಗಗಳಲ್ಲಿರುವ ಕಂಪ್ಯೂಟರ್‌ಗೆ ಆ್ಯಂಟಿವೈರಸ್‌ನ್ನು ಅಳವಡಿಸಲು ಅಧಿಸೂಚನೆ ಹೊರಡಿಸಲಾಗಿದ್ದು, ಎಲ್-1 ಸಂಸ್ಥೆಯವರಾದ ಮೆ॥ ಟೈಪ್‌ವೆಲ್ ಕಂಪ್ಯೂಟರ್ಸ್, ಶಿವಮೊಗ್ಗ ಇವರಿಗೆ 06/08/2013ರಂದು ಆದೇಶ ನೀಡಲಾಗಿದ್ದು, ಸದರಿಯವರು ಆ್ಯಂಟಿವೈರಸ್‌ಗಳನ್ನು ಅಳವಡಿಸುವ ಕಾರ್ಯ ಪೂರ್ಣಗೊಳಿಸಿದ್ದು, ದಿನಾಂಕ: 10/09/2013 ರಂದು ರೂ. 40180/- ಗಳನ್ನು ಪಾವತಿಸಲಾಗಿರುತ್ತದೆ. (ಯೋಜನೇತರ ಲೆಕ್ಕಶೀರ್ಷಿಕೆಯಡಿ) |
| 5 | **ಮುಖ್ಯ ಅಡಳಿತ ಕಛೇರಿಗೆ ವಾಟರ್ ಫಿಲ್ಟರ್ ಖರೀದಿಸುವ ಬಗ್ಗೆ.** | ಸಂಸ್ಥೆ ಆಡಳಿತ ಕಛೇರಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವುದರಿಂದ ಹೊಸದಾಗಿ ವಾಟರ್ ಫಿಲ್ಟರ್‌ನ್ನು ಖರೀದಿಸಲು ಸಭೆಯು | ಸಂಸ್ಥೆಯ ಮುಖ್ಯ ಆಡಳಿತ ಕಛೇರಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವುದರಿಂದ | ಸಂಸ್ಥೆ ಆಡಳಿತ ಕಛೇರಿಗೆ ವಾಟರ್ ಫಿಲ್ಟರ್‌ನ್ನು ಖರೀದಿಸಲು ದಿನಾಂಕ: 12/06/2013 ರಂದು |

| | | | | |
|---|---|---|---|---|
| | | ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. | ಕುಡಿಯುವ ನೀರಿಗೆ ತೊಂದರೆಯಾಗಿರುತ್ತದೆ, ಆದ್ದರಿಂದ ಹೊಸದಾಗಿ Water Filterನ್ನು ನಿಯಮಾನುಸಾರ ಖರೀದಿ ನಿಯಮ ಪಾಲಿಸಿ, ಖರೀದಿಸಲು ಸಭೆಯು ಅನುಮೋದಿಸಿತು. ಇದರ ಅಂದಾಜು ಮೊತ್ತ ರೂ. 25,000/- (ಯೋಜನೆ ಲೆಕ್ಕಶೀರ್ಷಿಕೆಯಡಿಯಲ್ಲಿ) | ಅಧಿಸೂಚನೆ ಹೊರಡಿಸಲಾಗಿದ್ದು, ಎಲ್-1 ಸಂಸ್ಥೆಯವರಾದ ಮೆ॥ ಸುದರ್ಶನ್ ಟ್ರೇಡರ್ಸ್, ಶಿವಮೊಗ್ಗ ಇವರಿಗೆ ದಿ: 29/06/2013 ರಂದು ಸರಬರಾಜು ಆದೇಶ ನೀಡಲಾಗಿದ್ದು, ಸದರಿ ಸಂಸ್ಥೆಯವರು ಈ ಉಪಕರಣವನ್ನು ಅಳವಡಿಸಿರುತ್ತಾರೆ. ದಿ: 16/09/2013 ರಂದು ರೂ. 15999/- ಗಳನ್ನು ಪಾವತಿಸಲಾಗಿರುತ್ತದೆ. |
| 6 | **ಡಿಜಿಟಲ್ ಹ್ಯಾಂಡಿಕ್ಯಾಮ್ ಖರೀದಿಸುವ ಬಗ್ಗೆ.** | ಸಿಮ್ಸ್ ಸಂಸ್ಥೆಯ ವಿವಿಧ ಕಾರ್ಯಕ್ರಮಗಳಿಗೆ ಅತ್ಯವಶ್ಯವಿರುವ ಡಿಜಿಟಲ್ ಹ್ಯಾಂಡಿಕ್ಯಾಮ್ ಕ್ಯಾಮೆರಾವನ್ನು ಖರೀದಿಸಲು ಸಭೆಯು ಅನುಮೋದನೆಗಾಗಿ ಮಂಡಿಸಲಾಯಿತು. | ಸಿಮ್ಸ್ ಸಂಸ್ಥೆಯಲ್ಲಿ ವಿದ್ಯಾರ್ಥಿಗಳು ಹಾಗೂ ವಿವಿಧ ರಾಷ್ಟ್ರೀಯ ಕಾರ್ಯಕ್ರಮದ ಸಂದರ್ಭದಲ್ಲಿ ಒಂದು ಉತ್ತಮ ಡಿಜಿಟಲ್ ಹ್ಯಾಂಡಿಕ್ಯಾಮ್ ಕ್ಯಾಮೆರಾದ ಅವಶ್ಯಕತೆ ಇರುವುದಾಗಿ ವಿದ್ಯಾರ್ಥಿಗಳು ಕೋರಿರುವುದರಿಂದ ಒಂದು ಉತ್ತಮ ಕಂಪೆನಿಯ ಹ್ಯಾಂಡಿಕ್ಯಾಮ್ ಕ್ಯಾಮೆರಾವನ್ನು ದರಪಟ್ಟಿಯ ಮುಖಾಂತರ ಖರೀದಿಸಲು ಸಭೆಯು ಅನುಮೋದಿಸಿತು. ಅಂದಾಜು ಮೊತ್ತ ರೂ. 25,000/- (ಯೋಜನೆ ಲೆಕ್ಕಶೀರ್ಷಿಕೆಯಡಿಯಲ್ಲಿ) | ಸಿಮ್ಸ್ ಸಂಸ್ಥೆಯ ವಿವಿಧ ಕಾರ್ಯಕ್ರಮಗಳಿಗೆ ಅತ್ಯವಶ್ಯವಿರುವ ಡಿಜಿಟಲ್ ಹ್ಯಾಂಡಿಕ್ಯಾಮ್ ಕ್ಯಾಮರಾವನ್ನು ಖರೀದಿಸಲು ದಿ: 04/07/2013 ರಂದು ಅಧಿಸೂಚನೆ ಹೊರಡಿಸಲಾಗಿದ್ದು, ಮೆ॥ ಲಕ್ಷ್ಮಿ ಟ್ರೇಡಿಂಗ್ ಕಂಪನಿ ಇವರು ಎಲ್-1 ಆಗಿದ್ದು ದಿ: 12/07/2013 ರಂದು ಸರಬರಾಜು ಆದೇಶ ನೀಡಲಾಗಿದ್ದು, ಕ್ಯಾಮರಾವನ್ನು ಸರಬರಾಜು ಮಾಡಿರುತ್ತಾರೆ. ಸದರಿ ಸಂಸ್ಥೆಯವರಿಗೆ ದಿ: 30/07/2013 ರಂದು ರೂ. 23950/- ಗಳನ್ನು ಪಾವತಿಸಲಾಗಿರುತ್ತದೆ. |
| 7 | **ಗ್ರಂಥಾಲಯ ಬುಕ್ ಬೈಂಡಿಂಗ್ ಮಾಡಿಸುವ ಬಗ್ಗೆ.** | ಸಂಸ್ಥೆಯ ಮುಖ್ಯ ಗ್ರಂಥಾಲಯ ವಿಭಾಗದಲ್ಲಿ ತುಂಬಾ ಹಳೆಯದಾದ ಪುಸ್ತಕಗಳನ್ನು ಹಾಗೂ ಜರ್ನಲ್ಸ್‌ಗಳನ್ನು ಬೈಂಡಿಂಗ್ ಮಾಡಿಸುವ ಬಗ್ಗೆ ಸಭೆಯ ಅನುಮೋದನೆಗೆ ಮಂಡಿಸಿದೆ. | ಸಂಸ್ಥೆಯ ಮುಖ್ಯ ಗ್ರಂಥಾಲಯ ವಿಭಾಗದ ಮುಖ್ಯಸ್ಥರು ತಮ್ಮ ವಿಭಾಗದಲ್ಲಿ ಲಭ್ಯವಿರುವ ಹಳೆಯ ಪುಸ್ತಕಗಳು ಹಾಗೂ ಜರ್ನಲ್ಸ್‌ಗಳನ್ನು ಬೈಂಡಿಂಗ್ ಮಾಡಿಸಲು ಬೇಡಿಕೆ ಪತ್ರವನ್ನು ಸಲ್ಲಿಸಿದ್ದು ದರಪಟ್ಟಿ ಆಹ್ವಾನಿಸಿ, ಕ್ರಮ ಕೈಗೊಳ್ಳಲು ಸಭೆಯು ಅನುಮೋದಿಸಿತು. ಅಂದಾಜು ಮೊತ್ತ | ಸಂಸ್ಥೆಯ ಮುಖ್ಯ ಗ್ರಂಥಾಲಯ ವಿಭಾಗದ ಹಳೆಯ ಪುಸ್ತಕಗಳು ಹಾಗೂ ಜರ್ನಲ್ಸ್‌ಗಳನ್ನು ಬೈಂಡಿಂಗ್ ಮಾಡಿಸಲು ದಿ: 08/10/2013 ರಂದು ಅಧಿಸೂಚನೆ ಹೊರಡಿಸಲಾಗಿದ್ದು, ಎಲ್-1 ಸಂಸ್ಥೆಯವರಾದ ಮೆ॥ ಗಂಗಾ ಬುಕ್ ಬೈಂಡರ್ಸ್, ಶಿವಮೊಗ್ಗ ಇವರಿಗೆ ದಿ: 11/11/2013 ರಂದು ಕಾರ್ಯಾದೇಶವನ್ನು ನೀಡಲಾಗಿದ್ದು, ಈ ಸಂಸ್ಥೆಯವರು |

| | | | | |
|---|---|---|---|---|
| | | | ರೂ. 85,000/– (ವಿದ್ಯಾರ್ಥಿಗಳ ಶುಲ್ಕನಿಧಿಯಿಂದ ಪಾವತಿಸಲಾಗುವುದು) | ಪುಸ್ತಕಗಳ ಬೈಂಡಿಂಗ್ ಕಾರ್ಯ ಪೂರ್ಣಗೊಂಡ ರೂ. 5925/– ಗಳನ್ನು ಪಾವತಿಸಲು ಕ್ರಮವಹಿಸಲಾಗುವುದು. |
| 8 | **ಫಾರೆನ್ಸಿಕ್ ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳನ್ನು (Instruments) ಖರೀದಿಸುವ ಬಗ್ಗೆ.** | ಫಾರೆನ್ಸಿಕ್ ವಿಭಾಗದ ಮುಖ್ಯಸ್ಥರ ಕೋರಿಕೆಯಂತೆ ಆ ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳನ್ನು (Instruments) ಖರೀದಿಸಿ ಕೊಡಲು ಕೋರಿರುತ್ತಾರೆ. ವಿಷಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ. | ಫಾರೆನ್ಸಿಕ್ ವಿಭಾಗದಲ್ಲಿ ಪೋಸ್ಟ್ ಮಾರ್ಟಮ್ ಕಾರ್ಯಕ್ಕೆ ಬಳಸುತ್ತಿರುವ ಉಪಕರಣಗಳು ತುಂಬಾ ಹಳೆಯದಾಗಿದ್ದು ಇನ್ನು ಕೆಲವು ಉಪಕರಣಗಳು ವಿಭಾಗದಲ್ಲಿ ಲಭ್ಯವಿಲ್ಲದಿರುವುದರಿಂದ ಪೋಸ್ಟ್ ಮಾರ್ಟಮ್ ಕಾರ್ಯಕ್ಕೆ ತುಂಬಾ ತೊಂದರೆಯಾಗುತ್ತಿರುವುದರಿಂದ ಈ ಉಪಕರಣಗಳನ್ನು ದರಪಟ್ಟಿಯ ಮುಖಾಂತರ ಖರೀದಿಸಿಕೊಡಲು ಸಭೆಯು ಅನುಮೋದಿಸಿತು. ಅಂದಾಜು ಮೊತ್ತ ರೂ. 90000/– (ಯೋಜನೆ ಲೆಕ್ಕಶೀರ್ಷಿಕೆಯಡಿಯಲ್ಲಿ) | ಫಾರೆನ್ಸಿಕ್ ವಿಭಾಗದ ಮುಖ್ಯಸ್ಥರ ಕೋರಿಕೆಯಂತೆ ಆ ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸಲು ಅಧಿಸೂಚನೆ ಹೊರಡಿಸಿ, ನಿಯಮಾನುಸಾರ ಖರೀದಿಸಲು ಕ್ರಮವಹಿಸಲಾಗಿದೆ. |
| 9 | **ಮುಖ್ಯ ಆಡಳಿತಾಧಿಕಾರಿಯವರ ಕಛೇರಿಗೆ ಕರ್ಟನ್‌ಗಳನ್ನು ಅಳವಡಿಸುವ ಬಗ್ಗೆ.** | ಮುಖ್ಯಆಡಳಿತಾಧಿಕಾರಿಯವರ ಕಛೇರಿಗೆ ಕರ್ಟನ್‌ಗಳನ್ನು ಅಳವಡಿಸಲು ವಿಷಯವನ್ನು ಅನುಮೋದನೆಗಾಗಿ ಮಂಡಿಸಲಾಗಿದೆ. | ನಿಯಮಾನುಸಾರ ಖರೀದಿನಿಯಮ ಪಾಲಿಸಿ ಅಳವಡಿಸಲು ಸಭೆಯು ತೀರ್ಮಾನಿಸಿತು. ಅಂದಾಜು ಮೊತ್ತ ರೂ. 45000/– (ಯೋಜನೆ ಲೆಕ್ಕಶೀರ್ಷಿಕೆಯಡಿಯಲ್ಲಿ) | ಮುಖ್ಯಆಡಳಿತಾಧಿಕಾರಿಯವರ ಕಛೇರಿಗೆ ಕರ್ಟನ್‌ಗಳನ್ನು ಅಳವಡಿಸಲು ದಿ: 18/06/2013 ರಂದು ಅಧಿಸೂಚನೆ ಹೊರಡಿಸಿ, ಎಲ್–1 ಸಂಸ್ಥೆಯವರಾದ ಮೆ॥ ರಾಯಲ್ ಫಾಮ್ & ಫರ್ನಿಶಿಂಗ್, ಶಿವಮೊಗ್ಗ ಇವರಿಗೆ ದಿ: 29/06/2013 ರಂದು ಸರಬರಾಜು ಆದೇಶ ನೀಡಲಾಗಿರುತ್ತದೆ. ಸದರಿ ಸಂಸ್ಥೆಯವರು ಆದೇಶದಲ್ಲಿ ನಮೂದಿಸಿದ ಕರ್ಟನ್‌ಗಳನ್ನು ಅಳವಡಿಸುವ ಕಾರ್ಯ ಪೂರ್ಣಗೊಳಿಸಿರುತ್ತಾರೆ. ಈ ಸಂಸ್ಥೆಯವರಿಗೆ ದಿ: 09/09/2013 ರಂದು ರೂ. 12662/– ಗಳನ್ನು ಪಾವತಿಸಲಾಗಿರುತ್ತದೆ. |

| | | | | |
|---|---|---|---|---|
| 10 | **ಆಡಳಿತ ಕಛೇರಿಯ ವಿಷಯ ನಿರ್ವಾಹಕರುಗಳಿಗೆ ಚೇರುಗಳನ್ನು ಖರೀದಿಸುವ ಬಗ್ಗೆ.** | ಮುಖ್ಯಆಡಳಿತ ಕಛೇರಿಯನ್ನು ನವೀಕರಿಸಲಾಗಿದ್ದು ಆ ವಿಭಾಗಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ವಿಷಯ ನಿರ್ವಾಹಕರುಗಳಿಗೆ ಚೇರುಗಳು ಬೇಕೆಂದು ಕೋರಿರುವುದರಿಂದ ಖರೀದಿಸಲು ವಿಷಯವನ್ನು ಅನುಮೋದನೆಗಾಗಿ ಮಂಡಿಸಿದೆ. | ನಿಯಮಾನುಸಾರ ಖರೀದಿನಿಯಮ ಪಾಲಿಸಿ ದರಪಟ್ಟಿಯ ಮುಖಾಂತರ ಖರೀದಿಸಲು ಸಭೆಯು ಅನುಮೋದಿಸಿತು. ಅಂದಾಜು ಮೊತ್ತ ರೂ. 90000/- (ಯೋಜನೆ ಲೆಕ್ಕಶೀರ್ಷಿಕೆಯಡಿಯಲ್ಲಿ) | ಮುಖ್ಯಆಡಳಿತ ಕಛೇರಿಯನ್ನು ನವೀಕರಿಸಲಾಗಿದ್ದು ವಿಭಾಗಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ವಿಷಯ ನಿರ್ವಾಹಕರುಗಳಿಗೆ ಚೇರುಗಳು ಖರೀದಿಸಲು ದಿನಾಂಕ: 03/06/2013 ರಂದು ಅಧಿಸೂಚನೆ ಹೊರಡಿಸಲಾಗಿದ್ದು ಮೆ॥ ಸುದರ್ಶನ್ ಟ್ರೇಡರ್ಸ್, ಶಿವಮೊಗ್ಗ ಇವರು ಎಲ್-1ಆಗಿದ್ದು, ದಿ: 12/06/2013 ರಂದು ಆದೇಶ ನೀಡಲಾಗಿದ್ದು, ಚೇರ್‌ಗಳನ್ನು ಸರಬರಾಜು ಮಾಡಿರುತ್ತಾರೆ. ಸದರಿಯವರಿಗೆ ದಿನಾಂಕ: 20/07/2013 ರಂದು ರೂ. 95000/- ಗಳನ್ನು ಪಾವತಿಸಲಾಗಿರುತ್ತದೆ. |

ಸಹಿ/-

ನಿರ್ದೇಶಕರು
ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಶಿವಮೊಗ್ಗ